ಮುಂಜಾವು
ವಾರಪತ್ರಿಕೆ.
ಸಂಪಾದಕ: ಸಿರಿಮನೆ ನಾಗರಾಜ್
'MUNJAVU' Kannada Weekly. KOPPA - CHM. ಫೋನ್: 114
5ನೇ ವರ್ಷ 38ನೇ ಸಂಚಿಕೆ ಕೊಪ್ಪ 14-6-1987 ಭಾನುವಾರ ಬೆಲೆ 50 ಪೈಸೆ

ಶಂಕರ್ ಕಾರ್ಮಿಕರ ನಿರಶನ ಚಳುವಳಿ ಆರಂಭ

ಕೊಪ್ಪ: ಕಾರ್ಮಿಕರ ಬೇಡಿಕೆಗಳನ್ನು ಶೀಘ್ರವಾಗಿ ಈಡೇರಿಸಬೇಕು ಮತ್ತು ಆಡಳಿತ ವರ್ಗ ಕಾರ್ಮಿಕರಿಗೆ ನೀಡುತ್ತಿರುವ ಕಿರುಕುಳವನ್ನು ನಿಲ್ಲಿಸಬೇಕೆಂದು ಒತ್ತಾಯಿಸಿ ಶಂಕರ್ ಸಾರಿಗೆ ಸಂಸ್ಥೆಯ ಕಾರ್ಮಿಕರು ಜೂನ್ 11ರಿಂದ ಸರಧಿ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದ್ದಾರೆ.

ಎ.ಐ.ಟಿ.ಯು.ಸಿ. ನೇತೃತ್ವದ ಚಿಕ್ಕಮಗಳೂರು ಜಿಲ್ಲಾ ಟ್ರಾನ್ಸ್‌ಪೋರ್ಟ್ ಮತ್ತು ಜನರಲ್ ಮಜ್ದೂರ್ ಸಂಘದ ಮೂಲಕ ಈ ವರ್ಷದ ಜನವರಿಯಲ್ಲೇ ಸಮಗ್ರ ಒಪ್ಪಂದವೊಂದಕ್ಕಾಗಿ ಬೇಡಿಕೆ ಪತ್ರ ಸಲ್ಲಿಸಿದ್ದರೂ ಮಾಲೀಕರು ಆ ಬೇಡಿಕೆಗಳನ್ನು ಈಡೇರಿಸುವುದಾಗಲಿ ಆ ಬಗ್ಗೆ ಅರ್ಥಪೂರ್ಣವಾದ ಮಾತುಕತೆ ನಡೆಸುವುದಾಗಲಿ ಮಾಡದೆ ಕಾರ್ಮಿಕರಿಗೆ ಒಂದೇ ಸಮನೆ ಕಿರುಕುಳ ನೀಡುತ್ತಿದ್ದಾರೆಂದು ಕಾರ್ಮಿಕರು ಆರೋಪಿಸಿದ್ದಾರೆ.

ಜೂನ್ 1ರಿಂದ ಈ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಸಂಘ ಘೋಷಿಸಿದ್ದು, ಆಡಳಿತ ವರ್ಗದ ಉನ್ನತ ಅಧಿಕಾರಿಯೊಬ್ಬರು ಕೊಟ್ಟ ಮಾತುಕತೆಯ ಆಶ್ವಾಸನೆಯ ಮೇರೆಗೆ ಜೂನ್ 10ರವರೆಗೆ ಮುಂದೂಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಹೀಗೆ ಆಶ್ವಾಸನೆ ಕೊಟ್ಟ ಆಡಳಿತ ವರ್ಗ ಮಾತುಕತೆ ಏರ್ಪಡಿಸುವ ಬದಲು, 1986ರ ನವೆಂಬರಿನಲ್ಲೇ ಇನ್ನೊಂದು ಸಂಘದೊಂದಿಗೆ ಒಪ್ಪಂದವಾಗಿರುವುದಾಗಿ ಕೊನೇ ಘಳಿಗೆಯಲ್ಲಿ ಉತ್ತರ ಕೊಟ್ಟಿದ್ದು, ಮರುದಿನವೇ ಮತ್ತೊಂದು ಪತ್ರ ಬರೆದು ಬೇಡಿಕೆಗಳನ್ನು ಪರಿಶೀಲಿಸುತ್ತಿರುವುದಾಗಿ ತಿಳಿಸಿದೆ.

ಆದರೆ ಬೇಡಿಕೆ ಪತ್ರ ಸಲ್ಲಿಸಿದ ಈ ಆರು ತಿಂಗಳ ಕಾಲವೂ ಮಾಲೀಕರು ಹೀಗೇ ಸಬೂಬು ಹೇಳಿ ದಿನ ದೂಡುತ್ತಿದ್ದು, ಇದೂ ಕೂಡ ಅಂಥದೇ ಇನ್ನೊಂದು ತಂತ್ರವೆಂದು ಕಾರ್ಮಿಕರು ತಿಳಿಸಿದ್ದಾರೆ.

ಕಂಪೆನಿಯು ಕಾರ್ಮಿಕರ ಬಾಯಲ್ಲಿ "ಚಮಚಾ ಸಂಘ" ಎನ್ನಿಸಿಕೊಂಡಿರುವ ಇನ್ನೊಂದು ಸಂಘದ ಹೆಸರಲ್ಲಿ 'ಕರಪತ್ರ ಚಳುವಳಿ'ಗೆಇಳಿದಿರುವುದು ಕಂಡು ಬಂದಿದೆ.

ಕಾರ್ಮಿಕರ ಉಪವಾಸ ಚಳುವಳಿ ಭಾನುವಾರ 4ನೇ ದಿನ ಪೂರೈಸಿ ಮುಂದುವರಿದಿದೆ. ಸಮಸ್ಯೆ ಬಗೆಹರಿಸುವ ಯಾವ ಕ್ರಮವನ್ನೂ ಮಾಲೀಕ ವರ್ಗ ಇನ್ನೂ ತೆಗೆದುಕೊಂಡಿಲ್ಲವೆನ್ನಲಾಗಿದೆ. ಆದರೆ ಬೇಡಿಕೆಗಳ ಬಗ್ಗೆ ಚಿಕ್ಕಮಗಳೂರಿನ ಉಪ ಕಾರ್ಮಿಕ ಕಮಿಶನರ್ ಅವರು ಜೂನ್ 18ಕ್ಕೆ ಸಂಧಾನ ಸಭೆಯೊಂದನ್ನು ಕರೆದಿದ್ದಾರೆ.

ಶಾಲಾ ಹಂತದಿಂದಲೇ ರಂಗ ತರಬೇತಿ — ಸರ್ಕಾರದ ಪರಿಶೀಲನೆ: ಬಿ. ಎಲ್. ಶಂಕರ್

(ವರದಿ: ಎಂ.ವಿ. ಗಂಗಾಧರ್)

ಜಯಪುರ : ಶಾಲೆಯ ಹಂತದಿಂದಲೇ ದೈಹಿಕ ಶಿಕ್ಷಣಪೀರ್‍ಯಡ್‌ಗಳ ಮಾದರಿಯಲ್ಲೇ ರಂಗ ತರಬೇತಿಯ ತರಗತಿಗಳನ್ನು **ಸಹ** ಅಳವಡಿಸುವ ಬಗ್ಗೆ ಸರ್ಕಾರ ಪರಿಶೀಲಿಸುವುದೆಂದು ಯುವಜನ ಸೇವಾ **ಮಂತ್ರಿ ಬಿ.** ಎಲ್. ಶಂಕರ್ ಇಲ್ಲಿ ಈಚೆಗೆ ಭರವಸೆಯಿತ್ತರು.

ಇಲ್ಲಿನ ಭಾರತೀಯ ಕಲಾ ಸಂಘದ ಆಶ್ರಯದ ರಾಜ್ಯ ಮಟ್ಟದ ನಾಟಕ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭದಲ್ಲಿ ಭಾಗವಹಿಸಿದ್ದ ಅವರು, ಕಲಾ ಸಂಘದವರು ಸಲ್ಲಿಸಿದ್ದ ಮನವಿಯಲ್ಲಿನ ಅಂಶಗಳಿಗೆ ಉತ್ತರ ಕೊಡುತ್ತ ಈ ಭರವಸೆ ನೀಡಿದರು.

ಗ್ರಾಮೀಣ ಪ್ರದೇಶಗಳಲ್ಲಿ ನಾಟಕ ಮತ್ತು ಇತರ ಕಲೆಗಳ ಪ್ರದರ್ಶನಕ್ಕೆ ಉತ್ತಮ ಸೌಲಭ್ಯಗಳನ್ನು ಒದಗಿಸುವುದಕ್ಕೆ ಶ್ರಮಿಸುವುದಾಗಿಯೂ ಅವರು ಭರವಸೆ ಕೊಟ್ಟರು. ರಾಜ್ಯದ ನಾಟಕ ಅಕಾಡೆಮಿಯ ಅಧಿಕಾರವನ್ನು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತುಗಳಿಗೆ ವಿಕೇಂದ್ರೀಕರಿಸುವ ಉದ್ದೇಶ ಸರ್ಕಾರಕ್ಕಿದೆಯೆಂದೂ ಅವರು ಹೇಳಿದರು.

ಆಲಿಕಲ್ಲು ಮಳೆಯಿಂದ ನಷ್ಟಕ್ಕೊಳಗಾದ ಬಡ ರೈತರಿಗೆ ಪರಿಹಾರಕ್ಕೆ ಒತ್ತಾಯ

ಶೃಂಗೇರಿ: ಈಚೆಗೆ ಮರ್ಕಲ್ ಪಂಚಾಯ್ತಿಯ ಹಲವು ಗ್ರಾಮಗಳಲ್ಲಿ ಆಲಿಕಲ್ಲು ಸಹಿತವಾದ ಭಯಂಕರ ಮಳೆ ಗಾಳಿಗೆ ಸಿಕ್ಕಿ ಹಲವಾರು ಬಡ ಜನರ ಭತ್ತದ ಗದ್ದೆಗಳು ಮತ್ತು ಸಣ್ಣ ಪುಟ್ಟ ಅಡಿಕೆ ತೋಟಗಳು ನಾಶವಾಗಿರುವ ಬಗ್ಗೆ ತೀವ್ರ ಸಂತಾಪ ವ್ಯಕ್ತಪಡಿಸಿರುವ ಮರ್ಕಲ್ ಪಂಚಾಯ್ತಿ ಮಂಡಲ ಪ್ರಧಾನರಾದ ಕಲಿಗೆ ಸಂಜೀವ ಗೌಡರು, ಹೀಗೆ ನಷ್ಟಕ್ಕೊಳಗಾಗಿರುವವರಿಗೆ ಪರಿಹಾರ ದೊರಕಿಸುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಶೀಘ್ರವಾಗಿ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಅಸ್ಪೃಶ್ಯತೆ ನಿವಾರಣೆ-ಧರ್ಮಶಾಸ್ತ್ರ-ಪ್ರಾಯಶ್ಚಿತ್ತ-ಬಹಿಷ್ಕಾರ ಇತ್ಯಾದಿ

— ಹರಿಹರಪುರ ಮಠಾಧೀಶರೊಂದಿಗೆ ಒಂದು ವಿಶಿಷ್ಟ ಸಂದರ್ಶನ

ಓದುಗರು ನಮ್ಮ ಕಳೆದ ವಾರದ ಪತ್ರಿಕೆಯಲ್ಲಿ, ಶೃಂಗೇರಿ ತಾಲ್ಲೂಕಿನ ಕೆಲ ಮಂದಿ ಬ್ರಾಹ್ಮಣ ಮುಖಂಡರುಗಳು ಹರಿಹರಪುರ ಮಠಾಧೀಶರನ್ನು ಮುಂದಿಟ್ಟುಕೊಂಡು ನಮ್ಮ ವೃದ್ಧ ತಂದೆ-ತಾಯಿಗಳ ಮೇಲೆ ಧಾರ್ಮಿಕ ದಬ್ಬಾಳಿಕೆ ನಡೆಸಿ, ಅಂತರ್ಜಾತಿ ವಿವಾಹವಾದ ನನ್ನ ತಂಗಿಗೂ, ಈ ವಿವಾಹಕ್ಕೆ ಕಾರಣನಾದವನೆಂಬ ನೆಲೆಯಲ್ಲಿ ಹಾಗೂ ಸ್ವತಃ ಅಂತರ್ಜಾತಿ ವಿವಾಹಿತನೆಂಬ ನೆಪದಲ್ಲಿ ನನಗೂ ನಮ್ಮ ಮನೆಯಿಂದ ಬಹಿಷ್ಕಾರ ಹಾಕಿಸಿ, ನಮ್ಮ ತಂದೆಗೆ 'ಪ್ರಾಯಶ್ಚಿತ್ತ' ಮಾಡಿಸಿ, ಮನೆಗೆ ಶುದ್ಧ-ಪುಣ್ಯಾಹ ಮಾಡಿಸಿದ ವಿವರಗಳನ್ನೆಲ್ಲ ಓದಿದ್ದೀರಷ್ಟೆ.

1986ರ ಡಿಸೆಂಬರ್ 7ರಂದು ನಡೆದ ಸದರಿ ವಿವಾಹದ ಬಗ್ಗೆ ನಮ್ಮ ತಂದೆ-ತಾಯಿಗಳು ಸಮಾಜವೆಂಬ 'ಗುಮ್ಮ'ದ ಭಯದಿಂದ ಮೊದಲಿಗೆ ಸ್ವಲ್ಪ ಅಳುಕಿದರಾದರೂ ಅನಂತರ ತಮ್ಮ ಮಗಳಿಗೊಂದು ಒಳ್ಳೆಯ ನೆಲೆಯಾಯಿತೆಂದೂ, ಇಂಥ ವಿವಾಹ ಪರ ಊರುಗಳಲ್ಲಿ ಹಾಗಿರಲಿ, ನಮ್ಮ ಅಕ್ಕಪಕ್ಕದಲ್ಲೇ ಬೇಕಾದಷ್ಟು ನಡೆದಿದೆ, ಈಗಲೂ ನಡೆಯುತ್ತಿದೆ, ಆದ್ದರಿಂದ ಭಯಪಡುವುದೇನಿದೆ ಎಂಬ ತಿಳುವಳಿಕೆಯಿಂದಲೂ ಧೈರ್ಯವಾಗಿದ್ದರು. ಆದರೆ ಅವರ ಮನಸ್ಸಿನ ಮೇಲೆ ಸತತವಾಗಿ ದಾಳಿ ಮಾಡಿ, ಮೂಗು-ಬಾಯಿ ಒತ್ತಿ ಹಿಡಿದು ಉಸಿರುಗಟ್ಟಿಸಿ, ಅವರು ಅಳುತ್ತಳುತ್ತಲೇ ತಮ್ಮ ಪ್ರೀತಿಪಾತ್ರ ಮಕ್ಕಳನ್ನು ತೊರೆಯುವಂತೆ ಮಾಡಲಾಗಿದೆ.

ಇದೇನು ಇಡೀ ಬ್ರಾಹ್ಮಣ ಸಮುದಾಯವೇ ಸ್ವಯಂ ಪ್ರೇರಣೆಯಿಂದ ಒಟ್ಟಾಗಿ ಮಾಡಿದ ಕೃತ್ಯವಲ್ಲ ಎಂಬುದು ನಮಗೆ ಗೊತ್ತಿದೆ. ಕಾಲ್ಪನಿಕ ಭೀತಿಯೊಂದನ್ನು ತಮ್ಮ ಸಮುದಾಯದಲ್ಲಿ ಹುಟ್ಟು ಹಾಕಿ ತಾವು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಾ ಹೋಗುವ ಮುಖಂಡರಿರುತ್ತಾರೆ. ಈ ಭೀತಿಯೊಂದಲ್ಲದಿದ್ದರೆ, ಇವರೆಲ್ಲ ತಮ್ಮ 'ಘನ' ಕಾರ್ಯಗಳಿಂದಾಗಿ ಮನೆ ಮುರುಕರೆಂದೋ, ಜುಗಾರಿಕೋರರೆಂದೋ, ಕಂಕನರಿಗಳೆಂದೋ—ತಮ್ಮ ಸಮೂಹದಲ್ಲೇ ಕುಖ್ಯಾತಿಗೊಳಗಾಗಿರುತ್ತಾರೆ. ಆದರೂ ಆ ಭೀತಿಯ ಬಲದಿಂದ ಜೀರಿಯುವರನ್ನು ಆಳುತ್ತಾರೆ. ಕೆಲವೇ ಮಂದಿ ಇಂಥ ಕುಖ್ಯಾತ ಮುಖಂಡರು ತಮ್ಮ ಹೀನ ನಡವಳಿಕೆಗಳಿಂದ ತಮ್ಮ ಇಡೀ ಸಮೂಹವನ್ನು ಯಾವ ರೀತಿ ಅಪಹಾಸ್ಯಕ್ಕೆ ಮತ್ತು ಅಪರಾಧಕ್ಕೆ ಸಿಕ್ಕಿಸುತ್ತಾರೆ ಎಂಬುದನ್ನು ಆ ಸಮೂಹ ತಡವಾಗಿ ತಿಳಿದಷ್ಟೂ ಆತ್ಮಘಾತುಕ. ಅದಕ್ಕೇ ಕೇಡು.

ಬಹಿಷ್ಕಾರ ಮತ್ತು ಪ್ರಾಯಶ್ಚಿತ್ತಗಳೂ ಅಷ್ಟೇ, ಕಾನೂನಿನ ಮುಂದೆ ಶಿಕ್ಷಾರ್ಹ ಅಪರಾಧ ಮಾತ್ರವಲ್ಲ ಇಂಥದನ್ನು ನಡೆಸಿದ ಯಾವುದೇ ಜಾತಿ ಅಥವಾ ಜನಾಂಗ ಸಾಮಾಜಿಕ ಶಿಷ್ಟತೆಯೆದುರು ತಲೆ ತಗ್ಗಿಸಬೇಕಾದಂಥ ಒಂದು ಹೇಸಿಗೆಯ ಕ್ರಮ.

ಅದೂ ಕೂಡ, ಯಾರೋ ಮಾರ್ಕ್ಸ್‌ನೋ, ಲೋಹಿಯಾನೋ, ಅಂಬೇಡ್ಕರನೋ ಅಲ್ಲ, ತಮ್ಮ ಧರ್ಮಕ್ಕೆ ಪುನರುಜ್ಜೀವನ ಕೊಟ್ಟವರೆಂದು ಯಾವ ಒಬ್ಬ ಮಹಾತ್ಮನನ್ನು ಇವರೆಲ್ಲ 'ಹಿಂದೂ, ಹಿಂದೂ' ಎಂದು ಇವತ್ತು ಬೊಂಬಡಾ ಹೊಡೆಯುತ್ತ ಪೂಜೆ ಮಾಡಿ ಮೆರೆಸುತ್ತಾರೋ, ಆ ವಿವೇಕಾನಂದರಂಥವರೇ, ಒಂದು ಶತಮಾನದಷ್ಟು ಹಿಂದೆಯೇ ಸ್ಪಷ್ಟ ಮಾತುಗಳಲ್ಲಿ ಪ್ರತಿಪಾದಿಸಿರುವುದು ಇದು.

ಅದಕ್ಕೂ ಮುಂಚೆ, ಈಗ್ಗೆ 8 ಶತಮಾನಗಳಷ್ಟು ಹಿಂದೆಯೇ ಬಸವಣ್ಣನಂಥ ಮಹಾನ್ ಚಿಂತಕರಿಂದ ಆಚರಣೆಗೆ ಬಂದಂಥದು. ಅದೂ ಈಗ 21ನೇ ಶತಮಾನಕ್ಕೆ ಪ್ರವೇಶಿಸಲು ಇಡೀ ದೇಶ ಸಿದ್ಧವಾಗುತ್ತಿದ್ದರೆ ಇವರುಗಳು ತಮ್ಮದೊಂದು ತಾಲ್ಲೂಕನ್ನು ಅಥವಾ ತಮ್ಮದೊಂದು ಜಾತಿಯನ್ನು 8ನೇ ಶತಮಾನದಲ್ಲೇ ಇರಿಸಿಕೊಳ್ಳಲು ಹೆಣಗಿದಂತೆ!

ಈ ವಿಚಾರವೆಲ್ಲ ಈ ಮುಖಂಡರಿಗೆ ಕೂಡ ಗೊತ್ತಿಲ್ಲದ್ದೇನಲ್ಲ. ಆದ್ದರಿಂದಲೇ ಅವರ ಈ ಚಟುವಟಿಕೆಗಳೆಲ್ಲ ತಮ್ಮ ಜಾತಿ ಅಥವಾ ಧರ್ಮದ ಉಳಿವಿಗಾಗಿ ಅಲ್ಲ (ಧರ್ಮಕ್ಕೆ ಇದರಿಂದ ಚ್ಯುತಿ ಬರುವುದೂ ಇಲ್ಲ), ಬದಲು ತಮ್ಮ ಸ್ವಂತದ ಹಿತಾಸಕ್ತಿಗಾಗಿಯೇ ಎಂದು ನಾನು ಹಿಂದೆಯೇ ಬರೆದಿದ್ದು. ಅಂತೂ ತಮ್ಮ ಈ ಸ್ವಹಿತಾಸಕ್ತಿಗಾಗಿ ತಮ್ಮ ಇಡೀ ಜನಾಂಗವನ್ನು, ಅಥವಾ ಕಡೇ ಪಕ್ಷ ತಮ್ಮ ಸಂಘದ ಸರ್ವಸದಸ್ಯರನ್ನು ಇವರುಗಳು ಈ ಅಪಮಾನಕರವಾದ ಕೊಚ್ಚೆಯಲ್ಲಿ ಅದ್ದಿದ್ದಾರೆಂದೇ ತಿಳಿಯಬೇಕು.

ಇದನ್ನು ತಡೆಯಬೇಕೆಂದು ನಾವು ಎರಡು ದೃಷ್ಟಿಯಿಂದ ಪ್ರಯತ್ನ ಪಟ್ಟೆವು. ಒಂದು: ನಮ್ಮ ತಂದೆ-ತಾಯಿಗಳಿಗೆ ಮಕ್ಕಳ ವಿಯೋಗವಾಗುವುದನ್ನು ತಪ್ಪಿಸಬೇಕು. ಎರಡು: ಮೇಲೆ ಹೇಳಿದಂತೆ ಯಾವುದೇ ಜನಾಂಗಕ್ಕೆ ಇದು ಗೌರವ ತರುವಂಥ ಸಂಗತಿಯಲ್ಲ. ಮೂರನೆಯ ಒಂದು ಕಾರಣವನ್ನೂ ಹುಡುಕುವುದಾದರೆ ಅದು ನನ್ನ ಕಳೆದ ವಾರದ ಬರವಣಿಗೆಯಲ್ಲಿ ಉಲ್ಲೇಖಿಸಿದಂಥ ವಿವೇಕಾನಂದರ ಸಂದೇಶ.

ಆದರೆ ಈ ಮುಖಂಡರ ಕೂಟ ಕಂತೆ-ಕಂತೆ ಸುಳ್ಳಿನ ಪ್ರಚಾರದಿಂದ ಹಿಡಿದು ಮನೆ ಮುರುಕತನದವರೆಗೆ ಎಲ್ಲ ನೀಚ ತಂತ್ರಗಳನ್ನೂ ಬಳಸಿದ್ದಲ್ಲದೆ, ತಮ್ಮ ಈ ಘನ ಉದ್ದೇಶವನ್ನು ಈಡೇರಿಸಲು ನಮ್ಮ ಕುಟುಂಬದೊಳಗೇ ವ್ಯೂಹವೊಂದನ್ನು ಸೃಷ್ಟಿಸಿದ್ದು ಗೊತ್ತಾದಾಗ ಇನ್ನು ಇದನ್ನು ತಡೆಗಟ್ಟಲು ಯತ್ನಿಸುವುದು ವ್ಯರ್ಥವೆನ್ನಿಸಿತು. ಆದರ ಬದಲು ಇಂಥ ನಡವಳಿಕೆಯ ಬಗ್ಗೆ ಸ್ವಲ್ಪ ಚರ್ಚೆಯಾದರೂ ನಡೆದರೆ, ಇಂಥದೇ ವಿಚಾರ ಮತ್ತು ಆಚರಣೆಗಳಿಂದ ಮರಗಟ್ಟಿ ಹೋಗಿರುವ ಸಮಾಜದ ಕೈ ಕಾಲುಗಳಿಗೆ ಸ್ವಲ್ಪ ಚೈತನ್ಯವಾದರೂ ಬಂದೀತು ಎನ್ನಿಸಿತು. ಅದಕ್ಕಿಂತ ಹೆಚ್ಚಾಗಿ, ಒಂದು ಸಮೂಹದ ಮುಖಂಡತ್ವವು ತನ್ನ ಪ್ರಥಮ ಆದ್ಯತೆಯ ಕಲ್ಯಾಣ ಕಾರ್ಯವೆಂದು ಕೈಗೆತ್ತಿಕೊಂಡಿರುವ ಈ ವಿಷಯ ಬೆಳಕಿಗೆ ಬರಲೇ ಬೇಕಾದ್ದು ಸೂಕ್ತವೂ ಆಗಿತ್ತು.

ಅಂಥ ಚರ್ಚೆ ನಡೆದಲ್ಲಿ ಅದರಲ್ಲಿ ಬಹಳ ಮುಖ್ಯವಾಗಿ ಚರ್ಚಿತವಾಗಬೇಕಾಗುವ ಒಂದು ಪಾತ್ರ ಹರಿಹರಪುರ ಗುರುಗಳದು. ಏಕೆಂದರೆ ಈ ಜಾತಿಯ (ಶಿವಳ್ಳಿ ಬ್ರಾಹ್ಮಣ) ಗುರುವಾದ ಅವರ ಹೆಸರು ಈ ಎಲ್ಲ ಚಟುವಟಿಕೆಗಳಲ್ಲಿ ಪದೇ ಪದೇ ಉಲ್ಲೇಖಿತವಾಗುತ್ತಿತ್ತು. ನಮ್ಮ ಮನೆಗೆ ಬರಲು ನಿರಾಕರಿಸುವ ಭಟ್ಟರುಗಳು, "ನಾವು ಬರಬಹುದೆಂದು ಹರಿಹರಪುರ ಮಠದಿಂದ ನಿರೂಪ ಹೊರಡಿಸಿದರೆ ಬರುತ್ತೇವೆ" ಎಂದಿದ್ದರು. "ಹರಿಹರಪುರ ಗುರುಗಳ ಹತ್ತಿರ ಹೋಗಿ ಬಂದು (ಅಂದರೆ ಕ್ಷಮಾಪಣೆ ಬೇಡಿಕೊಂಡು) ಪ್ರಾಯಶ್ಚಿತ್ತಾರ್ಥವಾಗಿ ಮನೆಗೊಂದು ಶುದ್ಧ-ಪುಣ್ಯಾಹ ಮಾಡಿಬಿಟ್ಟರೆ ಎಲ್ಲ ಸರಿಹೋಗುತ್ತೆ" ಎಂತಲೂ ನಮ್ಮ ತಂದೆಗೆ ಹೇಳಲಾಗಿತ್ತು. ಅಂತೂ ಒಟ್ಟಿನಲ್ಲಿ ಗುರುಗಳ ನಿರ್ದೇಶನದಂತೆಯೇ ಇದೆಲ್ಲ ನಡೆಯುತ್ತಿದೆಯೆಂದು ಅವರುಗಳು ಸಾಧಿಸಿಕೊಂಡು ಬಂದಿದ್ದರು.

ಆದರೆ ವಿಶ್ವ ಹಿಂದು ಪರಿಷತ್ತಿನ ವೇದಿಕೆಗಳಲ್ಲೆಲ್ಲ, "ಜಾತಿಭೇದ ತಪ್ಪು. ಹಿಂದುಗಳೆಲ್ಲ ಒಂದಾಗಬೇಕು. ಹಿಂದೂ ಧರ್ಮಕ್ಕಂಟಿರುವ ಅಸ್ಪೃಶ್ಯತೆಯ ಕಳಂಕವನ್ನು ಅಳಿಸಿ ಹಾಕಬೇಕು" ಮುಂತಾಗಿ ಭಾಷಣಗಳನ್ನೋ ನಿರ್ಣಯಗಳನ್ನೋ ಮಾಡುತ್ತಿದ್ದ (ಅಥವಾ ಅನುಮೋದಿಸುತ್ತಿದ್ದ) ಗುರುಗಳು ವಾಸ್ತವದ ಮಟ್ಟದಲ್ಲಿ ಈ ರೀತಿ ಆಚರಿಸುತ್ತಾರೆಯೆ? ಹೌದಾದರೆ ಈ ಚರ್ಚೆಯಲ್ಲಿ ಅವರ ಪ್ರಸ್ತಾಪ ಅನಿವಾರ್ಯವಾಗುತ್ತದೆ. ಆದರೆ ಹಾಗೆ ಪ್ರಸ್ತಾಪಿಸುವ ಮೊದಲು, ಯಾರೋ ಹೇಳಿದ್ದನ್ನು ನಂಬುವ ಬದಲಿಗೆ ಅವರನ್ನೇ ಕೇಳಬೇಕಾಗುತ್ತದೆ.

ಇದಕ್ಕಾಗಿ ಅವರನ್ನೇ ಸಂದರ್ಶಿಸಲು ಕಲ್ಕುಳಿ ವಿಠಲ ಹೆಗ್ಡೆ ಮತ್ತು ನಾನು ಮೇ 15ರಂದು ಹೋದೆವು. ಮೊದಲೇ ಫೋನ್ ಮಾಡಿ ಕೇಳಿದ್ದರಿಂದ ಅವರು ಕಾಯುತ್ತಿದ್ದರು. ನಾವು ಮಳೆಗೆ ಸಿಕ್ಕಿ ಹಾಕಿಕೊಂಡಿದ್ದು ಮುಂತಾದ ಕಾರಣಗಳಿಂದ ಹೋಗುವುದು 2 ಗಂಟೆ ತಡವಾಯಿತು. ಅದನ್ನೇ ಅವರು ತಮ್ಮ ಮೇಲುಗೈಯಾಗಿಸಿಕೊಳ್ಳಲು ನೋಡಿದರು—"ಸಂದರ್ಶನಕ್ಕೇ ಹೀಗೆ 2 ಗಂಟೆ ತಡವಾಗಿ ಬಂದ ನೀವು ಇಲ್ಲಿ ಬಂದು ಇನ್ನೇನು ಸಾಧಿಸಬಲ್ಲಿರಿ ಅಂತ ನಾನು ಆಗಲೇ ಅಂದುಕೊಂಡೆ" ಎಂದರು. ನಾವು ಅದಕ್ಕೆ ಅಷ್ಟು ಪ್ರಾಮುಖ್ಯ ಕೊಡಲಿಲ್ಲ.

ಸಂದರ್ಶನದಲ್ಲಿ ಪ್ರಸ್ತಾಪಕ್ಕೆ ಬರಲಿದ್ದ ವಿಚಾರ ಏನೆಂಬುದು ಅವರಿಗೆ ಗೊತ್ತೇ ಇತ್ತು. ಅದಕ್ಕಾಗಿ ಅವರು ತಮ್ಮ ಪಾಲಿನ ಸಿದ್ಧತೆ ಮಾಡಿಕೊಂಡೇ ಇದ್ದಂತಿತ್ತು. ಬಹುಶಃ ಇದೇ ಕಾರಣಕ್ಕಿರಬಹುದು—ಆರಂಭದಲ್ಲೇ ಅವರು ಒಂದೇ ಸಮನೆ ಆವೇಶದಿಂದ ನಮಗೆ ಪ್ರಶ್ನೆಗಳನ್ನೇ ಪೂರ್ತಿಯಾಗಿ ಕೇಳಲು ಬಿಡದೆ ಮಾತಾಡಿದರು (ಮಾತಾಡಿದರು ಎನ್ನುವುದಕ್ಕಿಂತ ಕೂಗಾಡಿದರು ಎಂಬುದೇ ಹೆಚ್ಚು ಸೂಕ್ತವೇನೋ!) ಸಾಮಾನ್ಯವಾಗಿ ಹೀಗಾದಾಗ ಎದುರಾಳಿಯೂ ಆವೇಶಕ್ಕೊಳಗಾಗಿ ಆಲೋಚನೆ ಮತ್ತು ಚರ್ಚೆಯ ದಿಕ್ಕೇ ತಪ್ಪಿ ಹೋಗುತ್ತದೆ.

ಆದರೆ ನಾವು ಎಷ್ಟೇ ಸಾವರಿಸಿಕೊಂಡರೂ ಯಾರ್ಯಾರದೋ ಏನೇನೋ ಅಪ್ರಸ್ತುತವಾದ ವಿಚಾರಗಳನ್ನೇ ಹೇಳುತ್ತ ಚರ್ಚೆಗೆ ಅವರು ಆಸ್ಪದ ಕೊಡುವಂತೆಯೇ ಕಾಣದಿದ್ದಾಗ ನಾವು, "ನೋಡಿ ಸ್ವಾಮೀಜಿ, ನೀವು ಹಾಗೆ ಹೇಳುವುದಾದರೆ, ನಾವೂ ಕೂಡ ಸ್ವಾಮಿಗಳೆಲ್ಲ ಏನೇನು ಮಾಡುತ್ತಿದ್ದಾರೆಂಬುದನ್ನು ನೋಡುತ್ತಲೇ ಇದ್ದೇವೆ. ಅಪ್ಪಟ ಹಾದರ, ಗೂಂಡಾಗಿರಿಗಳಲ್ಲೇ ಮುಳುಗಿರುವ ಸ್ವಾಮಿಗಳು ನಮ್ಮ ಕಣ್ಣ ಮುಂದೇ ಎಷ್ಟು ಜನ ಇಲ್ಲ? ನಾವು ನಿಮ್ಮ ಹತ್ತಿರ ಅದನ್ನೆಲ್ಲ ಚರ್ಚಿಸುತ್ತಿಲ್ಲ. ನಾವು ನಿಮಗೇ ನೇರವಾಗಿ ಸಂಬಂಧಿಸಿದ ಒಂದು ವಿಚಾರವನ್ನಷ್ಟೇ ಚರ್ಚಿಸಲು ಬಂದಿದ್ದೇವೆ" ಎನ್ನಬೇಕಾಯಿತು. ಆಗ ಮಾತ್ರ, "ನನ್ನ ಬಗೆಗೂ ಅಂಥದೇನಾದರೂ ಆರೋಪವಿದ್ದರೆ ಹೇಳಿರಪ್ಪ. ನಮ್ಮದು ಯಾವ ತಪ್ಪಿದ್ದರೂ ಒಪ್ಪಿಕೊಂಡುಬಿಡುತ್ತೇವೆ" ಎಂದನ್ನುತ್ತ, ಆವೇಶವನ್ನು ಸ್ವಲ್ಪ ತಗ್ಗಿಸಿಕೊಂಡು ಮಾತಾಡಲು ತೊಡಗಿದರು.

ಈಗ ಸಂದರ್ಶನದ ಎಲ್ಲ ಪ್ರಮುಖ ಅಂಶಗಳನ್ನೂ ನಿಮ್ಮ ಮುಂದಿಡುತ್ತಿದ್ದೇನೆ. ನೀವೇ ತೂಕ ಹಾಕಿ.

ಪ್ರಶ್ನೆ: ನೀವು ನಮ್ಮ ತಂದೆಯವರಿಗೆ ಅಂದರೆ ಸಿರಿಮನೆ ರಾಮಯ್ಯನವರಿಗೆ ಯಾವ ತಪ್ಪಿಗಾಗಿ ಪ್ರಾಯಶ್ಚಿತ್ತ ಮಾಡಿಸುತ್ತಿದ್ದೀರಿ?

ಸ್ವಾಮೀಜಿ : ನಾನು ಪ್ರಾಯಶ್ಚಿತ್ತ ಮಾಡಿಸುತ್ತಿರುವುದಲ್ಲ

ಪ್ರಶ್ನೆ: ಮತ್ತೆ, ಮನೆಗೆ ಶುದ್ಧಿ ಮಾಡಿ ಪುಣ್ಯಾಹ ಮಾಡಬೇಕು, ತಂದೆಯವರು ಪ್ರಾಯಶ್ಚಿತ್ತಕ್ಕಾಗಿ ನಿಮ್ಮ ಹತ್ತಿರ ತೀರ್ಥ ತೆಗೆದುಕೊಳ್ಳಬೇಕು. ಹಾಗೂ ಇನ್ನು ಮುಂದೆ ನನ್ನನ್ನೂ, ನಮ್ಮ ತಂಗಿಯನ್ನೂ ಹಾಗೂ ನಮ್ಮನ್ನು ಮನೆಗೆ ಸೇರಿಸಿಕೊಳ್ಳುವ ನಮ್ಮ ಯಾವುದೇ ಸೋದರರು ಅಥವಾ ಬಂಧುಗಳನ್ನೂ ಮನೆಗೆ ಸೇರಿಸಬಾರದು ಎಂದು ಹೇಳಿದ್ದೀರಂತಲ್ಲ?

ಸ್ವಾ: ನಿಮ್ಮ ತಂದೆ ಹಾಗೆ ಮಾಡಬೇಕೆಂದು ನಾನೇನೂ ಹೇಳಿಲ್ಲ. ನಿಮ್ಮ ಅಣ್ಣಂದಿರೇ ಬಂದು "ನಮ್ಮ ಮನೆಯಲ್ಲಿ ಇಂಥದೊಂದು ಮದುವೆ ಆಗಿ ಹೋಗಿದೆ ಆದರಿಂದ ಈಗ ನಮ್ಮ ಮನೆಗೆ ಪುರೋಹಿತರ್ಯಾರೂ ಬರಲು ಒಪ್ಪುತ್ತಿಲ್ಲ. ನಮ್ಮ ತಂದೆಯವರಿಗೆ ಅತ್ಯಂತ ಪಶ್ಚಾತ್ತಾಪವಾಗಿದೆ. ಅವರ ಸ್ಥಿತಿ ಬಹಳ ಚಿಂತಾಜನಕವಾಗಿದೆ" ಎಂದು ಹೇಳಿ ಮಾರ್ಗದರ್ಶನ ಕೇಳಿದರು. ಅದಕ್ಕಾಗಿ

(3ನೇ ಪುಟಕ್ಕೆ)

ಹರಿಹರಪುರ ಮಠಾಧೀಶರೊಂದಿಗೆ ಒಂದು ವಿಶಿಷ್ಟ ಸಂದರ್ಶನ

(ಎರಡನೇ ಪುಟದಿಂದ)

ಧರ್ಮಶಾಸ್ತ್ರದಲ್ಲಿ ಇಂಥ ದೋಷಕ್ಕೆ ಯಾವ ಪರಿಹಾರ ಹೇಳಿದೆಯೋ ಅದನ್ನು ಮಾತ್ರ ಅವರಿಗೆ ನಾನು ಹೇಳಿದ್ದು.

ಪ್ರಶ್ನೆ: ಯಾವ ದೋಷ?

ಸ್ವಾ: ಸಂಸರ್ಗ ದೋಷ ಅಂತ. ಅದಕ್ಕೆ, ಶುದ್ಧಿ ಮಾಡಿ ಪಂಚಗವ್ಯ ತೆಗೆದುಕೊಳ್ಳಬೇಕು ಎಂದಿದೆ. **ಹಾಗೆಂದು ಬರೆದುಬಿಟ್ಟಿದ್ದಾರೆ** (ಒತ್ತಿ ಹೇಳಿದರು.) ಯಾವ ಪುರೋಹಿತರನ್ನಾದರೂ ಕರೆದು ಪಂಚಗವ್ಯ ತೆಗೆದುಕೊಳ್ಳಬಹುದು. ನನ್ನಿಂದಲೇ ತೆಗೆದುಕೊಳ್ಳಬೇಕೆಂದಿಲ್ಲ.

ಪ್ರ: ಮಗಳೋ ಮಗನೋ ಅಸ್ಪೃಶ್ಯರ ಜೊತೆ ಮದುವೆಯಾದರೆ ತಂದೆಗೆ ಸಂಸರ್ಗ; ಅದಕ್ಕೆ ಆತನಿಗೆ ಹೀಗೆ ಪ್ರಾಯಶ್ಚಿತ್ತ ಮಾಡಿ ಪುನಃ ಜಾತಿಗೆ ಸೇರಿಸುವುದು ಎಂದು ಧರ್ಮಶಾಸ್ತ್ರ ಹೇಳುತ್ತದೆಯಾ?

ಸ್ವಾ: ಹೌದು.

ಪ್ರ: ಯಾವ ಧರ್ಮಶಾಸ್ತ್ರದಲ್ಲಿ ಹೀಗೆ ಹೇಳಿದೆ ತಿಳಿಸುತ್ತೀರಾ?

ಸ್ವಾ: (ಆವೇಶದಿಂದ ಗಟ್ಟಿಯಾಗಿ) ಯಾವ ಧರ್ಮಶಾಸ್ತ್ರ ಅಂತ ಕೇಳಲಿಕ್ಕೆ ನೀವು ಧರ್ಮಶಾಸ್ತ್ರ ಏನು ಓದಿದ್ದೀರ್ರೀ? ಧರ್ಮಶಾಸ್ತ್ರದ ಒಂದು ಪುಸ್ತಕ, ಅದರ ಒಂದು ಬೈಂಡನ್ನಾದರೂ ನೋಡಿದ್ದೀರೇನ್ರಿ? ನಿಮಗೆ ಧರ್ಮಶಾಸ್ತ್ರ ಏನು ಅರ್ಥವಾಗುತ್ತೆ?

ಪ್ರ: ನಾವು ಧರ್ಮಶಾಸ್ತ್ರವನ್ನಾಗಲಿ ಅದರ ಬೈಂಡನ್ನಾಗಲಿ ನೋಡಿರದಿದ್ದರೂ ನಿಮ್ಮಂಥವರು ಯಾರೋ ಹೇಳಿದ್ದನ್ನೋ ಅಥವಾ ಬೇರೆಲ್ಲಿಯಾದರೂ ಬರೆದಿರುವುದನ್ನೋ ಅಷ್ಟಿಷ್ಟು ಕೇಳಿದ್ದೇವೆ ಅಥವಾ ಓದಿದ್ದೇವೆ. ಇಲ್ಲವಾದರೆ ಈಗಲಾದರೂ ಹೋಗಿ ನೋಡುತ್ತೇವೆ. ಯಾವ ಧರ್ಮಶಾಸ್ತ್ರ ಗ್ರಂಥದಲ್ಲಿದೆ ಹೇಳಿ.

ಸ್ವಾ: ಸಂಸರ್ಗದೋಷದ ಬಗ್ಗೆ ಎಲ್ಲ ಗ್ರಂಥಗಳಲ್ಲೂ ಬರೆದಿದೆ. ಧರ್ಮಸಿಂಧು, ನಿರ್ಣಯಸಿಂಧು, ಮನುಸ್ಮೃತಿ — ಹೀಗೆ ಎಲ್ಲದರಲ್ಲೂ ಹೇಳಿದೆ.

ಪ್ರ: ಧರ್ಮಶಾಸ್ತ್ರದಲ್ಲಿ ಇನ್ನೂ ಬಹಳಷ್ಟು ನಿಯಮಗಳನ್ನೂ ಹೇಳಿದೆಯಲ್ಲ. ಅದನ್ನೂ ಹೀಗೇ ಜಾರಿಗೊಳಿಸುತ್ತಿದ್ದೀರಾ? ಉದಾಹರಣೆಗೆ ಬ್ರಾಹ್ಮಣನಾದವ ಮದ್ಯ ಕುಡಿಯಬಾರದು, ಮಾಂಸ ತಿನ್ನಬಾರದು, ಜುಗಾರಿ ಆಡಬಾರದು, ಅಂತೆಲ್ಲಾ ಇದೆ. ಅಷ್ಟೇಕೆ, ವ್ಯಾಪಾರ, ಕೃಷಿ ಕೂಡ ಮಾಡಬಾರದು, ಬರೀ ವೇದಾಧ್ಯಯನ ಮಾತ್ರ ಮಾಡಿಕೊಂಡಿರಬೇಕು ಎಂದಿದೆ. ಆದರೆ ನಿಮ್ಮ ಶಿಷ್ಯ ವರ್ಗದಲ್ಲೇ ಇದನ್ನೆಲ್ಲ ಮಾಡದವರು ಎಷ್ಟು ಜನ ಸಿಗುತ್ತಾರೆ? ಅವರೆಲ್ಲರಿಗೂ ಇದನ್ನೆಲ್ಲ ನೀವು ಹೇಳುತ್ತೀರಾ?

ಸ್ವಾ: ಬೇರೆಯವರಿಗೆ ಹೇಳುವುದು ನನ್ನ ಕೆಲಸವಲ್ಲ. ನಾನು ಹೇಳಿದರೆ ಯಾರೂ ಕೇಳುವುದೂ ಇಲ್ಲ.

ಪ್ರ: ನಿಮ್ಮದು ಈ ಜಾತಿಗೆ ಗುರು ಪೀಠವಷ್ಟೆ? ಧರ್ಮ ಶಾಸ್ತ್ರವು ಗುರು ಪೀಠಕ್ಕೂ ಸ್ಪಷ್ಟ ಜವಾಬ್ದಾರಿಯನ್ನು ವಹಿಸಿರಲೇ ಬೇಕಲ್ಲ. ನಿಮ್ಮ ಕೆಲಸವಲ್ಲ ಎಂದರೆ ಧರ್ಮಶಾಸ್ತ್ರ ಒಪ್ಪುತ್ತಾ?

ಸ್ವಾ: ಗುರುಪೀಠ ಇದೆಯೆನ್ನುವುದು ನಿಮಗೆ ಈಗ ಜ್ಞಾಪಕಕ್ಕೆ ಬಂತೊ? ಈಗ ಸಮಸ್ಯೆ ಬಂದಾಗ ನನ್ನ ಹತ್ತಿರ ಬಂದಿದ್ದೀರಲ್ಲ, ಮೊದಲೇ ಬಂದು ಇದನ್ನೆಲ್ಲ ಕೇಳಬಹುದಿತ್ತಲ್ಲ?

ಪ್ರ: ಸಮಸ್ಯೆ ಬಂದಿದೆ ಅಂತ ನಿಮ್ಮ ಹತ್ತಿರ ಬಂದಿರುವುದಲ್ಲ. ನನ್ನ ಮನೆಯ ಸಮಸ್ಯೆಯನ್ನು ನಾನು ಬಗೆಹರಿಸಿಕೊಳ್ಳುತ್ತೇನೆ. ನಿಮ್ಮ ಹತ್ತಿರ ಧರ್ಮ ನಿರ್ಣಯಕ್ಕಾಗಿ ಖಂಡಿತ ಬರಬೇಕಾಗಿಲ್ಲ.... ನೀವು ಮಾಡುತ್ತಿರುವ ಈ ಕೆಲಸ ಸಮ್ಮತವೇ? ಎಂದು ಕೇಳುವುದಕ್ಕಾಗಿ ಮಾತ್ರ ಸಂದರ್ಶನಕ್ಕೆ ಬಂದಿದ್ದೇವೆ. ಇದನ್ನೆಲ್ಲ ಪ್ರಕಟಿಸಲಿಕ್ಕಾಗಿಯೇ ಕೇಳುತ್ತಿದ್ದೇವೆ.

ವಿಠಲ್: ನಮಗೆ ನೀವು ಗುರುವೂ ಅಲ್ಲ, ಪೀಠವೂ ಅಲ್ಲ. ನಮಗೆ ನೀವು ಏನಿದ್ದರೂ ವಯಸ್ಸಿನಲ್ಲಿ ಮಾತ್ರ ಹಿರಿಯರು, ಆದ್ದರಿಂದಲೇ ನಿಮಗೆ ನಮ್ಮದು ಗೌರವವೇ ಹೊರತು ಭಕ್ತಿಯಲ್ಲ (ಪೂಜ್ಯತೆಯಲ್ಲ.) ನಾವು ಬಂದಿರುವುದು ನಿಮ್ಮ ಗುರು ಪೀಠಕ್ಕೆ ಸಂಬಂಧಪಟ್ಟ ಸಂದರ್ಶನಕ್ಕೆ ಮಾತ್ರ.

ಸ್ವಾ: ನೀವು ಈ ವಿಚಾರವನ್ನೆಲ್ಲ ಶೃಂಗೇರಿಯ ಜಗದ್ಗುರುಗಳ ಹತ್ತಿರ ಕೇಳಬೇಕು. ದೊಡ್ಡ ದೊಡ್ಡ ವಿಚಾರಗಳನ್ನು ಯಾವಾಗಲೂ ದೊಡ್ಡವರ ಹತ್ತಿರವೇ ಕೇಳಬೇಕು

ಪ್ರ: ಅಲ್ಲಿಗೆ ಹೋಗುವ ಪ್ರಮೇಯವೇ ಇಲ್ಲ. ಈ ಜಾತಿಗೆ ನಿಮ್ಮದು ಗುರುಪೀಠವಾದ್ದರಿಂದಲೇ ನಮ್ಮ ಅಣ್ಣಂದಿರಾದರೂ ನಿಮ್ಮ ಹತ್ತಿರ ಬಂದದ್ದು. ನೀವು ಅವರಿಗೆ ಪ್ರಾಯಶ್ಚಿತ್ತದ ವಿಚಾರ ಹೇಳಿರುವುದರಿಂದಲೇ ಅದು ಯಾವ ತಪ್ಪಿಗೆ ಎಂದು ನಾವು ಕೇಳಲು ಬಂದಿರುವುದು.

ಇನ್ನು. ನಿಮ್ಮ ಮಾತು ಯಾರೂ ಕೇಳುವುದಿಲ್ಲ ಎನ್ನುತ್ತೀರಿ. ಕೇಳುವುದಿಲ್ಲ ಎನ್ನುವವರ ಮಾತು ಬಿಡಿ. ಆದರೆ ನಿಮ್ಮ ಧಾರ್ಮಿಕ ಮಾರ್ಗದರ್ಶನದಂತೆಯೇ ನಡೆಯುವವರು ಎಂದು ಹೇಳಿಕೊಳ್ಳುತ್ತಾರಲ್ಲ. ನಿಮ್ಮ ಸದ್ಗುರು ಸೇವಾ ಸಮಿತಿಯ ಮುಖಂಡರುಗಳೇ ಇದ್ದಾರೆ. ಅವರಲ್ಲೇ ಹಲವರು, ಈ ಹಿಂದೆ ತಿಳಿಸಿದಂಥ 'ಧರ್ಮಶಾಸ್ತ್ರ ಸಮ್ಮತವಲ್ಲದ' ನಡವಳಿಕೆಗಳು ಮಾತ್ರವಲ್ಲ, ಇನ್ನೂ ವಿಪರೀತವಾದ ಎಷ್ಟೋ ಅನಾಚಾರಗಳನ್ನು ಕೂಡ ಮಾಡುತ್ತಿದ್ದಾರೆ.

ಉದಾಹರಣೆಗೆ, ಅಂಥ ಒಬ್ಬ ಮುಖಂಡನ ಮನೆಯಲ್ಲಿ ಕೂಲಿ ಹೆಣ್ಣೊಬ್ಬಳು ಆತ್ಮಹತ್ಯೆ ಮಾಡಿಕೊಂಡಳು. ಅದು ತಿಳಿದ ಕೂಡಲೇ ಆತನ ಕಿರಿಯ ತಮ್ಮ ಊರು ಬಿಟ್ಟು ತಲೆ ಮರೆಸಿಕೊಂಡು ದೇಶಾಂತರ ಹೋದಂತೆ ಮಾಡಿದರು. ಕೆಲ ಕಾಲದ ನಂತರ ಮನೆಗೆ ಆತನಿಂದ ದೂರದ ಒಂದು ಊರಿನಿಂದ ಒಂದು ಕಾಗದ ಬಂದು ಅದರಲ್ಲಿ ತಾನು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಬರೆದಿತ್ತೆಂದು ಪ್ರಚಾರ ಹಬ್ಬಿಸಿ ಆತ ಸತ್ತುಹೋಗಿದ್ದಾನೆಂದು ಸುದ್ದಿ ಮಾಡಿದರು. ಆದರೆ ಆತ ಈಗಲೂ ಧಂಡಿಯಾಗಿದ್ದಾನೆ. ವಾಸ್ತವವಾಗಿ ಆ ಹೆಣ್ಣು ಯಾವ ಕಾರಣಕ್ಕೆ ಪ್ರಾಣ ಕಳೆದು ಕೊಂಡಳೋ ಅದಕ್ಕೆ ಆ ತಮ್ಮ ಒಬ್ಬನೇ ಕಾರಣನಾಗಿದ್ದುದಲ್ಲ, ಈ ಮುಖಂಡ ಅಣ್ಣನೂ ಕಾರಣನಾಗಿದ್ದ ಎಂದು ಊರಲ್ಲೆಲ್ಲ ಸುದ್ದಿಯಿದೆ. ಇದರ ಪೂರ್ತಿ ವಿವರ ನಿಮಗೂ ಗೊತ್ತಿಲ್ಲದ್ದೇನಲ್ಲ. ಇಂಥವರಿಂದ ಇಂಥವು ಎಷ್ಟೋ ಎಷ್ಟೋ ನಡೆಯುತ್ತಿವೆ. ಅದೂ ನಿಮಗೆ ಗೊತ್ತು.

ಹೀಗೆ ನಿಮ್ಮ ಧಾರ್ಮಿಕ ಆದೇಶದಂತೆಯೇ ನಡೆದುಕೊಳ್ಳುತ್ತೇವೆನ್ನುತ್ತ ಇಂಥದನ್ನೆಲ್ಲ ಮಾಡುತ್ತಿದ್ದಾರಲ್ಲ, ಅವರಿಗಾದರೂ ನೀವು ಧರ್ಮ ಶಾಸ್ತ್ರದಲ್ಲಿ ಬರೆದಂತೆ ನಡೆಯಲು ಹೇಳುತ್ತಿದ್ದೀರಾ ?

ಸ್ವಾ: ಅಯ್ಯೋ ಹೇಳಿದೆನಲ್ಲ, ಯಾರೂ ನನ್ನ ಮಾತು ಕೇಳುವುದಿಲ್ಲ. ನನ್ನ ಶಿಷ್ಯರಲ್ಲೇ, ಶ್ರೀಮಂತ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದವರೇ ಎಷ್ಟೋ ಜನ ಕುಡಿದು ರಸ್ತೆಯಲ್ಲಿ ಬಿದ್ದುಕೊಳ್ಳುವಂಥ ಉದಾಹರಣೆ ಕೂಡ ಬೇಕಾದಷ್ಟಿದೆ. ಅದಕ್ಕೆಲ್ಲ ಏನೂ ಮಾಡಲು ಆಗುವುದಿಲ್ಲ.

ಪ್ರ: ಹಾಗಾದರೆ ಗುರುಪೀಠ ಇದ್ದು ಏನು ಪ್ರಯೋಜನವಾಯಿತು? " 'ಗುರು' ಎಂಬ ಪದ ಅಮೂಲ್ಯವಾದುದು. ತನ್ನ ಶಿಷ್ಯವೃಂದಕ್ಕೆ ಬುದ್ಧಿ ಹೇಳಿ ತಿದ್ದಲಾರದವ ಗುರುವೇ ಅಲ್ಲ" ಎಂದು ಒಂದು ಸೂಕ್ತಿಯೇ ಇದೆಯಲ್ಲವೆ?

ಸ್ವಾ: 'ಗುರು' ಎಂದರೆ ನಾನು ವಿದ್ಯಾರ್ಥಿಗಳಿಗೆ ವಿದ್ಯೆ ಮಾತ್ರ ಕಲಿಸುವ ಗುರು ಅಷ್ಟೆ. ಅದರಲ್ಲಿ ಜಾತಿ ಭೇದವಿಲ್ಲ. ಎಲ್ಲ ಜಾತಿಗಳವರೂ ಬರುತ್ತಾರೆ. ಅದರಂತೆ ನನ್ನ ನೇತೃತ್ವದಲ್ಲಿ 4 ವಿದ್ಯಾ ಸಂಸ್ಥೆಗಳು ನಡೆಯುತ್ತಿವೆ. ಸುಮಾರು 4 ಸಾವಿರ ವಿದ್ಯಾರ್ಥಿಗಳು ಉತ್ತಮವಾಗಿ ವಿದ್ಯೆ ಪಡೆಯುತ್ತಿದ್ದಾರೆ ..

ಪ್ರ: ಇನ್ನೂರು–ಇನ್ನೂರೈವತ್ತು ಶಿವಳ್ಳಿ ಬ್ರಾಹ್ಮಣರ ಮನೆಗಳಿಗೆ ಮಾತ್ರ ನಮ್ಮದು ಗುರುಪೀಠ ಎಂದು ನೀವೆ ಹಿಂದೊಮ್ಮೆ ಇಲ್ಲೇ ಹೇಳಿದ್ದಿರಿ. ಈಗ ನಿಮ್ಮ ಜವಾಬ್ದಾರಿ ಎಂದು ಹೇಳುವಾಗ 'ನಾನು ಬರೀ ವಿದ್ಯೆ ಕಲಿಸುವ ಗುರು ಮಾತ್ರ' ಎನ್ನುತ್ತಿದ್ದೀರಲ್ಲ. ನೀವು ಹೇಗೆ ಹೇಳಿದರೂ ಗುರುಪೀಠಕ್ಕಿರುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಅದಿರಲಿ.

ಕಳೆದ ಫೆಬ್ರುವರಿಯಲ್ಲಿ ಚಿಕ್ಕಮಗಳೂರಲ್ಲಿ ನಡೆದ ವಿಶ್ವ ಹಿಂದು ಪರಿಷತ್ ಸಮ್ಮೇಳನದಲ್ಲಿ ನೀವೂ ಸೇರಿದಂತೆ ಜಿಲ್ಲೆಯ ಎಲ್ಲ ಮಠಾಧಿಪತಿಗಳೂ ಒಟ್ಟಿಗೆ ಅಸ್ಪೃಶ್ಯತೆ ನಿವಾರಣೆ ಬಗ್ಗೆ ನಿರ್ಣಯ ಅಂಗೀಕರಿಸಿದರಲ್ಲ, ಅದಕ್ಕೆ ನಿಮ್ಮದೂ ಸಂಪೂರ್ಣ ಒಪ್ಪಿಗೆ ಇತ್ತು ತಾನೆ?

ಸ್ವಾ: ಹೌದು, ಇದೆ.

ಪ್ರ: ಸರಿ. ಅಲ್ಲಿ ಅಸ್ಪೃಶ್ಯತೆ ನಿವಾರಣೆಯ ನಿರ್ಣಯಕ್ಕೆ ಒಪ್ಪಿಗೆ ಇದೆ ಎನ್ನುತ್ತೀರಿ. ಇಲ್ಲಿ ಅದರ ಒಂದು ಸಣ್ಣ ಹೆಜ್ಜೆಯನ್ನು ಸಂಸರ್ಗ ದೋಷ ಎನ್ನುತ್ತೀರಲ್ಲ....

ಸ್ವಾ: (ಒನ್ಮೆಲೇ ಆವೇಶದಿಂದ) ಏನ್ರೀ, ಅಸ್ಪೃಶ್ಯತೆ ನಿವಾರಣೆ ಎಂದರೆ ಊಟಕ್ಕೇ ಕರೆದು ಕೂರಿಸಿಕೊಳ್ಳುವುದೇನ್ರೀ? ಅವರನ್ನು ಕ್ಲೀನ್ ಮಾಡೀ, ವಿದ್ಯಾ–ಬುದ್ಧಿ ಕೊಟ್ಟು ಸುಧಾರಣೆ ಮಾಡೀSS.... ಅದಕ್ಕೇ ನಿರ್ಣಯದಲ್ಲಿ ಅಸ್ಪೃಶ್ಯತೆಯ ಸುಧಾರಣೆ ಎಂತ ಹೇಳಿದೆ, ನಿವಾರಣೆ ಅಂತ ಹೇಳಿಲ್ಲ....

ಪ್ರ: ಇಲ್ಲ, ಅಸ್ಪೃಶ್ಯತೆಯ ನಿವಾರಣೆ ಎಂತಲೇ ನಿರ್ಣಯ ಹೇಳಿದೆ. ಹಾಗೆಂತ ಜಿಲ್ಲಾ ಪತ್ರಿಕೆಗಳಲ್ಲೆಲ್ಲ ಪ್ರಕಟವಾಗಿದೆ. ಅಲ್ಲದೆ, ಅಸ್ಪೃಶ್ಯತೆಯ **ನಿವಾರಣೆ**ಯಲ್ಲದೆ ಅಸ್ಪೃಶ್ಯತೆಯ 'ಸುಧಾರಣೆ' ಎಂದರೇನು? ಅವರನ್ನು ಸ್ವಲ್ಪ ಸುಧಾರಣೆ ಮಾಡಿ ಹಾಗೇ ಅಸ್ಪೃಶ್ಯರಾಗಿಯೇ ಇಟ್ಟುಬಿಡುವುದು ಅಂತಲಾ?....

ಸ್ವಾ: ಹಾಗಲ್ರೀ. ಯಾವುದೇ ಸುಧಾರಣೆ ಕ್ರಮ ಪ್ರಕಾರ ಆಗಬೇಕು. ಏಕ್‌ದಂ ಮದುವೆ ಆಗಿಬಿಡೋದೇನು? ಮೊದಲಿಗೆ ಆಹಾರ, ವಿಹಾರಾದಿಗಳಲ್ಲಿ ಅವರೊಂದಿಗೆ ಒಡನಾಡಿ, ಅನಂತರ....

ಪ್ರ: ಇದು ಏಕ್‌ದಂ ಆದ ಮದುವೆ ಎಂದು ನಿಮಗೆ ಹೇಳಿದವರಾರು? ನಮ್ಮ ಹುಡುಗ ಕ್ಲೀನ್ ಇಲ್ಲ ಎಂದು ನಿಮಗೆ ಹೇಳಿದವರ್ಯಾರು? ನಾವು ಎಷ್ಟು ವರ್ಷಗಳಿಂದ ಅಸ್ಪೃಶ್ಯರೊಂದಿಗೆ ಆಹಾರ–ವಿಹಾರಾದಿ ಒಡನಾಟ ಮಾಡಿದ್ದೇವೆಂದು ನಿಮಗೆ ಗೊತ್ತಿಲ್ಲವಾ?

ನಮ್ಮ ಹುಡುಗ ನಿಮ್ಮ ಶಿಷ್ಯ ಸಮೂಹದ ಶೇ. 75 ರಷ್ಟು ಜನರಿಗಿಂತ, ಅವರ ಹತ್ತು ಪಟ್ಟು ಕ್ಲೀನ್ ಇದ್ದಾರೆ. ಅಷ್ಟೇ ವಿದ್ಯಾವಂತ. ಸುಸಂಸ್ಕೃತ. ಉತ್ತಮ ಉದ್ಯೋಗಸ್ಥ. ಯಾವ ದುರಭ್ಯಾಸಗಳಿಲ್ಲದವ.

ಇನ್ನು ನಮ್ಮ ಕುಟುಂಬದಲ್ಲಿ ಇವತ್ತಲ್ಲ, ಈಗ್ಗೆ 15 ವರ್ಷದಿಂದಲೇ ಹರಿಜನರ ಜೊತೆ ಆಹಾರ–ವಿಹಾರಾದಿ ಒಡನಾಟ ಮಾಡಿದ್ದೇವೆ. ಇದೇ ಸಿರಿಮನೆಗೆ ದಲಿತ ಸಂಘರ್ಷ ಸಮಿತಿಯ ಎಂ. ಡಿ. ಗಂಗಯ್ಯ ಮುಂತಾಗಿ ನಮ್ಮ ಎಷ್ಟೋ ಜನ ಹರಿಜನ ಗೆಳೆಯರು ಬಂದಿದ್ದಾರೆ, ಬರುತ್ತಿರುತ್ತಾರೆ. ಜಾತಿ ಗೊತ್ತಿದ್ದೂ ಸಹ ನಮ್ಮ ಅಪ್ಪಯ್ಯ ಯಾವ ಭೇದವಿಲ್ಲದೆ ಅವರುಗಳ ಜೊತೆ ಒಂದೇ ಪಂಕ್ತಿಯಲ್ಲಿ ಒಟ್ಟಿಗೆ ಕೂತು ಊಟ ಮಾಡಿದ್ದಾರೆ. ಇದಕ್ಕೆ ನಾವು ಯಾವ ಮಹತ್ವವನ್ನೂ ಕೊಟ್ಟಿಲ್ಲ.

ಹೀಗಿರುವಾಗ ಆಕಸ್ಮಿಕವಾಗಿ ಇಷ್ಟೊಳ್ಳೆ ಗುಣಗಳಿರುವ ಗಂಡು ಸಿಗುವ ಅವಕಾಶ ಬಂದಾಗ, 'ಯಾಕಾಗಬಾರದು? ನಮಗೆ ನಮ್ಮ ಹುಡುಗಿ ಸಂತೋಷ, ನೆಮ್ಮದಿಯಿಂದ ಬಾಳುವುದು ಮುಖ್ಯ. ನಮ್ಮ ಜಾತಿಯಲ್ಲೇ ನಮ್ಮ ತಂಗಿಯನ್ನು ಇಷ್ಟು ಚೆನ್ನಾಗಿ ನೋಡಿಕೊಳ್ಳಬಲ್ಲ ಎಷ್ಟು ಹುಡುಗರು ನಮಗೆ ಸಿಕ್ಕಿಯಾರು?' ಎನ್ನಿಸಿದ್ದರಿಂದ ಮದುವೆ ಮಾಡಿದ್ದೇವೆ....

ಸ್ವಾ: ಹಾಂ, ನೋಡಿ! ನಿಮ್ಮ ಸ್ವಾರ್ಥಕ್ಕಾಗಿ ನೀವು ಮಾಡಿದ್ದೀರಿ. ಆದರಲ್ಲಿ ಅಸ್ಪೃಶ್ಯತೆಯ ನಿವಾರಣೆಯಾಗಿಲಿ, ಆದರ್ಶ

(4ನೇ ಪುಟಕ್ಕೆ)

ಸಂದರ್ಶಕರು :

ಸಿರಿಮನೆ ನಾಗರಾಜ್ ಕಲ್ಕುಳಿ ವಿಠಲ ಹೆಗ್ಡೆ

ಹರಿಹರಪುರ ಮಠಾಧೀಶರೊಂದಿಗೆ ಒಂದು ವಿಶಿಷ್ಟ ಸಂದರ್ಶನ

(2ನೇ ಪುಟದಿಂದ)

ವಾಗಲಿ ಎಲ್ಲಿ ಬಂತು? ನಿಮಗೆ ಅಷ್ಟು ಆದರ್ಶವಿದ್ದರೆ ಕೂಲಿ ಮಾಡುವ ಯಾರಾದರೂ ನಿಮ್ಮೂರಿನ ಹರಿಜನ ಹುಡುಗನಿಗೆ ಕೊಡಬೇಕಿತ್ತು.... ಇಷ್ಟೆಲ್ಲ ಹೇಳುತ್ತಾರಲ್ಲ. ಯಾರಾದರೊಬ್ಬ ಶ್ರೀಮಂತ ಬ್ರಾಹ್ಮಣ ಒಬ್ಬ ಕೂಲಿ ಮಾಡುವ ಹರಿಜನ ಹುಡುಗಿಯನ್ನು ಮದುವೆಯಾಗಲಿ ನೋಡೋಣ. ನಾನು 10 ಸಾವಿರ ರೂ. ಬಹುಮಾನ ಕೊಟ್ಟೇನು....

(ಅವರ ಈ ಮಾತು ಕೇವಲ ವಾದಕ್ಕೆ ಮಾತ್ರ. ಸ್ವಲ್ಪ ಸಮಯದ ಹಿಂದೆ, ನಮ್ಮೂರಿನ ಬಳಿಯ ಹಳ್ಳಿಯೊಂದರಲ್ಲಿ ಕಡು ಬಡವರಾದ ಇದೇ ಜಾತಿಯ ಬ್ರಾಹ್ಮಣರ ಹುಡುಗಿ ಕೂಲಿಕಾರ ಹರಿಜನ ಹುಡುಗನೊಬ್ಬನನ್ನು ಮದುವೆಯಾದಾಗ ಅವಳ ತಂದೆ–ತಾಯಿಗಳಿಗೆ ಪ್ರಾಯಶ್ಚಿತ್ತ ಮಾಡಿ ಜಾತಿಗೆ ಸೇರಿಸಿಕೊಂಡು ಹುಡುಗಿಯನ್ನು ಮಾತ್ರ ಬಹಿಷ್ಕರಿಸಲಾಯಿತು. ಇದಕ್ಕೆ ಕೂಡ 'ಧಾರ್ಮಿಕ ಮಾರ್ಗದರ್ಶನ' ಈ ಗುರುಪೀಠದ್ದೇ.)

ಪ್ರ: ಬರೀ ಆದರ್ಶಕ್ಕಾಗಿ ಯಾರು ಮದುವೆಯಾಗುತ್ತಾರೆ? ಮದುವೆಯಲ್ಲಿರುವುದು ಸ್ವಾರ್ಥವೇ — ನಮ್ಮ ಹುಡುಗಿ ಚೆನ್ನಾಗಿ ಬದುಕುವಂತಾಗಬೇಕು, ಅಥವಾ ನಮ್ಮ ಹುಡುಗನಿಗೆ ಒಳ್ಳೆಯ ಹೊಂದಾಣಿಕೆಯಾಗಬೇಕು ಅಂತ. ಅದರ ಜೊತೆಗೆ ಆದರ್ಶವೂ ಆಗುವಂತಿದ್ದರೆ ಸಂತೋಷ, ಅಷ್ಟೇ. 'ಅಂತರ ಜಾತಿ ಮದುವೆ ಆಗುವವರೆಲ್ಲ ಕೂಲಿಯ ಹೆಣ್ಣನ್ನೋ ಗಂಡನ್ನೋ ಮದುವೆ ಆಗಿ, ನೋಡೋಣ!' ಎನ್ನುವ ಸವಾಲೇ ಅತ್ಯಂತ ಮೂರ್ಖತನದ್ದು. ಕೇವಲ ಇಂಥ ವಿವಾಹವನ್ನು ವಿರೋಧಿಸಬೇಕು ಎಂಬ ಒಂದೇ ಉದ್ದೇಶದಿಂದ ಕೇಳುವ ಬರೀ ತಿಳಿಗೇಡಿ ಪ್ರಶ್ನೆ ಅದು.

ಸ್ವಾ: (ವಿಠಲ್‌ಗೆ) ನೀವು ಇಷ್ಟೆಲ್ಲ ಹೇಳುತ್ತೀರಲ್ಲ. ನಿಮ್ಮ ಜಾತಿಯಲ್ಲಿ ಒಂದಾದರೂ ಇಂಥ ವಿವಾಹ ಆಗುವುದಿಲ್ಲವಲ್ಲ. ಎಲ್ಲ ಬೇರೆಯವರಿಗಾಗಿ ಮಾತ್ರ ಹೇಳುತ್ತೀರಾ ಅಂತ?

ವಿ: ನನ್ನ ಜಾತಿ ಎಂದರೆ ಯಾವುದು? ಗೌಡರ ಜಾತಿ ಎನ್ನುತ್ತೀರಾ? ಮೊಟ್ಟಮೊದಲನೆಯದಾಗಿ ನನಗೆ ಎಲ್ಲ ಮನುಷ್ಯರೂ ಒಂದೇ ಜಾತಿ. ನೀವು 'ಹಿಂದೂ ಧರ್ಮದಲ್ಲಿ ಎಲ್ಲರೂ ಒಂದು' ಎಂಬಷ್ಟಾದರೂ ಗೆರೆ ಹಾಕುತ್ತೀರಿ. ನಮಗೆ ಈ 'ಧರ್ಮ'ಗಳ ಗೆರೆಯೂ ಇಲ್ಲ. ಹಿಂದೂಗಳೂ ಅಷ್ಟೆ. ಮುಸ್ಲಿಮರೂ ಅಷ್ಟೆ, ಕ್ರೈಸ್ತರು, ಜೈನರು, ಬೌದ್ಧರು, ಹೀಗೆ ಯಾವ ಧರ್ಮದವರೇ ಆಗಲಿ, ಎಲ್ಲರೂ ಒಂದೇ ಜಾತಿ.

ಎರಡನೆಯದಾಗಿ, ನಾನು ವೈಯಕ್ತಿಕವಾಗಿ ಸಹ ಇಂಥದೇ ಮದುವೆ ಆಗಿದ್ದೇನೆ. ನಾನು ಮದುವೆಯಾಗಿರುವವಳು ಕ್ರಿಶ್ಚಿಯನ್ ಹುಡುಗಿ. ಆದರೆ ನಮ್ಮಿಬ್ಬರ ಮಧ್ಯೆ ಆ ಭೇದ ಕೂಡ ಇಲ್ಲ. 3ನೆಯದಾಗಿ, ಒಬ್ಬ ಬ್ರಾಹ್ಮಣ ಹುಡುಗ, ಗೌಡರ ಹುಡುಗಿ ಇವರ ಮದುವೆಯನ್ನೂ ನಾವು ನಿಂತು ಮಾಡಿಸಿದ್ದೇವೆ.

ಸ್ವಾ: ಹಾಂ, ಅಂತೂ ನಿಮಗೆ ಕೆಡಿಸಲು ಬ್ರಾಹ್ಮಣ ಜಾತಿಯವರೇ ಬೇಕು ಅಂದ ಹಾಗಾಯಿತು !

(ಇಲ್ಲಿ ಬ್ರಾಹ್ಮಣ ಹುಡುಗನ್ನ ಮದುವೆಯಾದರೆ ಗೌಡರ ಹುಡುಗಿಯ 'ಜಾತಿ ಕೆಟ್ಟದ್ದು' ಅವರಿಗೆ ಮುಖ್ಯವಲ್ಲ, ಇರಲಿ)

ವಿ: ಅಂದರೆ ನೀವು ಬ್ರಾಹ್ಮಣ ಜಾತಿಗೆ ಮಾತ್ರ ಗುರು ಎಂದ ಹಾಗಾಯಿತು. ಈಗಷ್ಟೇ ನೀವು ಹೇಳಿದಂತೆ ಎಲ್ಲ ಜಾತಿಯವರೂ ಬರ್ತಾರೆ, ಎಲ್ಲರಿಗೂ (ವಿದ್ಯೆ ಕಲಿಸುವ) ಗುರು ಎಂದದ್ದು ಬರೀ ಮಾತಿಗೆ ಮಾತ್ರ.

ಆದರೆ ನಾವು ಇಲ್ಲಿ ಕೇಳುತ್ತಿರುವುದು ಮದುವೆ ಆಗದಿರುವ ಬಗ್ಗೆಯಲ್ಲ, ಆಗಿರುವ ಮದುವೆಯ ಬಗ್ಗೆ ನಿಮ್ಮ ನಿಲುವು ಏನು ಅಂತ. ಇನ್ನು ನೀವು ಹೇಳುವ ಯಾವುದೋ ಒಂದು ಜಾತಿಯಲ್ಲಿ ಮಾತ್ರವಲ್ಲ, ಎಲ್ಲಾ ಜಾತಿ–ಎಲ್ಲಾ ಮತದವರ ಮಧ್ಯೆಯೂ ಇಂಥ ವಿವಾಹಗಳು ನಡೆಯಬೇಕು, ಎಲ್ಲ ಮನುಷ್ಯರೂ ಸಹಜೀವಿಗಳಾಗಿ ಬಾಳುವಂತಾಗಬೇಕು ಎಂಬುದೇ ನಮ್ಮ ಧ್ಯೇಯ ಇದಕ್ಕೆ ನಿಮ್ಮ ವಿರೋಧವೂ ಇರಲಾರದು ಎಂದುಕೊಂಡಿದ್ದೆವು ನಿಮ್ಮ ಭಾಷಣಗಳನ್ನು ಕೇಳಿ.

ಸ್ವಾ: ನನಗೆ ನಿಜವಾಗಿಯೂ ಭೇದವಿಲ್ಲ. ನಾನು ಅಲ್ಲಿ ಭಾಷಣದಲ್ಲೂ ಅದನ್ನೇ ಹೇಳಿದೆ. ಜಿಲ್ಲಾಧಿಕಾರಿಗಳು ತಮ್ಮ ಭಾಷಣದಲ್ಲಿ ಒಂದು ಮಾತು ಹೇಳಿದ್ದರು–'ಎಲ್ಲಾ ಊರಲ್ಲೂ ಹರಿಜನರನ್ನು ಊರಿಂದ ಹೊರಗಿಡುವ ಪದ್ಧತಿ ಇದೆ. ನಮ್ಮ ಧರ್ಮದಲ್ಲಿರುವ ಈ ಪದ್ಧತಿಯನ್ನು ನಿವಾರಿಸಿ ಅವರನ್ನೂ ಊರೊಳಗೇ ಸೇರಿಸಿಕೊಳ್ಳಬೇಕು ಅಂತ.

ಅದಕ್ಕೆ ನನ್ನ ಭಾಷಣದಲ್ಲಿ ನಾನು ಉತ್ತರಕೊಟ್ಟೆ. ಹರಿಜನರನ್ನು ಊರ ಹೊರಗಿಟ್ಟಿರುವುದು ನಾವಲ್ಲ. ಇದಕ್ಕೆ ಸರಕಾರ ಮತ್ತು ಅಧಿಕಾರಿಗಳೇ ಕಾರಣ ಅಂತ. ಸರಕಾರ ಅವರಿಗೆ ಜನತಾ ಮನೆ ಕಟ್ಟಿಸಿಕೊಡುತ್ತದೆ. ಕಟ್ಟಿಸುವ ಕಂಟ್ರಾಕ್ಟರ್ ಮತ್ತು ಅಧಿಕಾರಿಗಳು ಹಣವನ್ನೆಲ್ಲ ನುಂಗಿ ಹಾಕಿ, ಅತ್ಯಂತ ಕಳಪೆ ಹಂಚು–ನಾಟ ಬಳಸಿ ಮನೆ ಅಂತ ಕಟ್ಟಿಸಿ ಕೊಡುತ್ತಾರೆ. ಅದು ಒಂದೆರಡು ವರ್ಷದಲ್ಲೇ ಬಿದ್ದು ಹೋಗುತ್ತದೆ. ಆದ್ದರಿಂದ ಅಂಥ ಮನೆ ಊರೊಳಗೆ ಕಟ್ಟಿದರೆ ಯಾರಾದರೂ ವಿರೋಧಿಸಬಹುದು ಅಂತ ಸರಕಾರವೇ ಅವನ್ನು ಊರ ಹೊರಗೆ ಕಟ್ಟಿಸುತ್ತಿದೆಯೆಂದು ನನ್ನ ನಂಬಿಕೆ ಎಂದೆ.

(ವಾಸ್ತವವಾಗಿ, ಜನತಾ ಮನೆಗಳು ಬರುವುದಕ್ಕೂ ಮೊದಲೇ ಹರಿಜನ ಕೇರಿಗಳು ಊರ ಹೊರಗೆ ಪ್ರತ್ಯೇಕವಾಗಿಯೇ ಇದ್ದುವಲ್ಲ. ಅವರು ಊರೊಳಗೆ ಬೆರೆಯದಂತೆ ಅಸ್ಪೃಶ್ಯತೆ ಸೃಷ್ಟಿಸಿದ್ದು ಈ 'ಧರ್ಮ'ನೇ ತಾನೆ? ಇದು ಗೊತ್ತಿದ್ದರೂ, ಸುಮ್ಮನೆ ಚರ್ಚೆಯ ಜಾಡು ತಪ್ಪುತ್ತದೆಂದು ಸುಮ್ಮನಾದೆವು.)

ಸ್ವಾ: (ಮುಂದುವರಿಸುತ್ತಾ) ಊರೊಳಗೆ ಬೇಕಾದರೆ ಯಾವ ಬ್ರಾಹ್ಮಣನ ಮನೆಯ ಪಕ್ಕದಲ್ಲಾದರೂ–ಅಷ್ಟೇಕೆ ನಮ್ಮ ಮಠದ ಪಕ್ಕದಲ್ಲೇ ಬೇಕಾದರೂ, ಸರ್ಕಾರಿ ಜಾಗವಿದ್ದರೆ ಹರಿಜನರಿಗೆ ಮನೆ ಕಟ್ಟಿಸಿಕೊಡಲಿ. ನಾವ್ಯಾರೂ ಅಡ್ಡಿ ಬರೊಲ್ಲ. ನಾನೇ ಬೇಕಾದರೆ ಅವರನ್ನು ಮುಟ್ಟಿಸಿಕೊಳ್ಳುವುದಕ್ಕೂ ಸಿದ್ಧ. ಇಲ್ಲಿ ನಮ್ಮ ಮಠದೊಳಗೇ ಯಾವ ಯಾವ ಜಾತಿಯವರೋ, ಹರಿಜನರೂ ಕೂಡ ಬಂದು ಹೋಗುತ್ತಾರೆ. ನಾವು ಯಾರನ್ನೂ ಪ್ರಶ್ನಿಸುವುದಿಲ್ಲವಲ್ಲ.

ಪ್ರ: ನೀವು ಹೀಗೆ ಅಸ್ಪೃಶ್ಯರನ್ನು ಮುಟ್ಟಿಸಿಕೊಳ್ಳುವುದನ್ನೂ ಧರ್ಮಶಾಸ್ತ್ರ ಕಟ್ಟುನಿಟ್ಟಾಗಿ ನಿಷೇಧಿಸುತ್ತದಲ್ಲ. ನೀವು ವಿದ್ಯೆ ಕಲಿಸುವ ಗುರು ಎಂದಿರಿ. ಬ್ರಾಹ್ಮಣರಲ್ಲದವರಿಗೆ ವಿದ್ಯೆ ಕಲಿಸುವುದನ್ನೂ ನಿಷೇಧಿಸುತ್ತದಲ್ಲ.

ಸ್ವಾ: ವಿದ್ಯೆಯನ್ನಲ್ಲ, ವೇದಕಲಿಸುವುದಕ್ಕೆ ಮಾತ್ರ ನಿಷೇಧ ಇರುವುದು.

ಪ್ರ: ಹಾಗೇ ಆಗಲಿ. ಮೊನ್ನೆ ವೇದ ಶಿಕ್ಷಣ ಶಿಬಿರದಲ್ಲಿ ನೀವು, "ಎಲ್ಲಾ ಜಾತಿಯವರಿಗೂ ವೇದ ಕಲಿಸಬೇಕು" ಎಂದಿರಲ್ಲ. ಇದಾದರೂ ಧರ್ಮ ಶಾಸ್ತ್ರಕ್ಕೆ ವಿರೋಧ ತಾನೇ?

ಸ್ವಾ: ಅದು ಕೇವಲ, 'ವೇದ ಎಂದರೆ ಬ್ರಾಹ್ಮಣರು ಇತರೆ ಜಾತಿಯವರನ್ನು ತುಳಿಯಲು ಗಂಟು ಕಟ್ಟಿ ಇಟ್ಟು ಕೊಂಡಿರುವ ಏನೋ ಒಂದು ಮೋಸ' ಎಂಬ ತಪ್ಪು ಕಲ್ಪನೆ ಇತರೆ ಜಾತಿಯವರಲ್ಲಿದೆಯಲ್ಲ, ಅದನ್ನು ಹೋಗಲಾಡಿಸಲಿಕ್ಕಾಗಿ ಮಾತ್ರ

ಪ್ರ: ಯಾವ ಉದ್ದೇಶಕ್ಕೇ ಆಗಲಿ, ವೇದವನ್ನು ಬ್ರಾಹ್ಮಣೇತರರಿಗೆ ಕಲಿಸುವುದು ನಿಷಿದ್ಧವಷ್ಟೇ?

ಸ್ವಾ: ಕಲಿಸುವುದೆಂದರೆ ಪೂರ್ತಿಯನ್ನಲ್ಲ, ಪೂರ್ತಿ ವೇದಾಧ್ಯಯನಕ್ಕೆ 16 ವರ್ಷವಾದರೂ ಆಗೊಲ್ಲ

ಪ್ರ: ಸ್ವಲ್ಪ ಕಲಿತವನು ಅಷ್ಟಕ್ಕೇ ನಿಲ್ಲಿಸುತ್ತಾನಾ? ಪೂರ್ತಿ ಕಲಿಯಲು ಪ್ರಯತ್ನಿಸಿಯೇ ಪ್ರಯತ್ನಿಸುತ್ತಾನೆ. ಇರಲಿ, ಸ್ವಲ್ಪವೇ ಕಲಿಸುವುದು ಎಂದಿಟ್ಟುಕೊಳ್ಳೋಣ **ಆದರೆ ವೇದದ ಒಂದಕ್ಷರವನ್ನೂ ಬ್ರಾಹ್ಮಣರಲ್ಲದವರಿಗೆ ಕಲಿಸಬಾರದೆಂದು ಸ್ಪಷ್ಟವಾಗಿ ಧರ್ಮಶಾಸ್ತ್ರ ಹೇಳಿದೆ ತಾನೆ?** ಈಗ ದ್ವೇಷನಿವಾರಣೆಗಾಗಿ ಕಲಿಸಬೇಕೆನ್ನುತ್ತೀರಿ. ಅಂದರೆ ಕಾಲಧರ್ಮಕ್ಕನುಗುಣವಾಗಿ ಎನ್ನಿ.

ಸ್ವಾ: ಹೌದು. ಅಷ್ಟೆ.

ಪ್ರ: ಕಾಲ ಧರ್ಮಕ್ಕನುಸಾರವಾಗಿ ಶಾಸ್ತ್ರ ನಿಷಿದ್ಧವಾದ ಇದನ್ನೆಲ್ಲ ನೀವು ಬೋಧಿಸುತ್ತೀರಾದರೆ ಅದೇ ಕಾಲಧರ್ಮಕ್ಕನುಗುಣವಾಗಿ ಅಂತರ್ಜಾತಿ ಅಥವಾ ಅಸ್ಪೃಶ್ಯ ಜಾತಿಯೊಡನೆ ವಿವಾಹ ಸಂಬಂಧ ಇನ್ನೂ ನಿಷಿದ್ಧವೆಂದು ಯಾಕೆ ಹೇಳುತ್ತೀರಿ?

ಸ್ವಾ: ಒಟ್ಟಿನಲ್ಲಿ ನನ್ನ ಬಾಯಲ್ಲಿ 'ಇದು ಸರಿ' ಅಂತ ಹೇಳಿಸಬೇಕು ಅಂತ ನಿಮ್ಮ ಹಟ. ಆದರೆ ನಾನು ಹಾಗೆ ಹೇಳಲು ಸಾಧ್ಯವಿಲ್ಲ. ನೀವು ಹೇಳಿದಂತೆ ನಾನು ಕೇಳಬೇಕಾಗಿಲ್ಲ.

ವಿಠಲ್: (ಬಹಳ ಸ್ಫುಟವಾಗಿ, ಅಷ್ಟೇ ಸಮಾಧಾನದಿಂದ) ನೋಡಿ ಸ್ವಾಮೀಜಿ, ಅಲ್ಲಿ ವೇದಿಕೆಯಲ್ಲಿ ಅಸ್ಪೃಶ್ಯತೆ ನಮ್ಮ ಧರ್ಮಕ್ಕೆ ಕಳಂಕ, ಅದನ್ನು ತೊಡೆದು ಹಾಕಬೇಕು ಎನ್ನುತ್ತೀರಿ. ಇಲ್ಲಿ ಅಂಥದೇ ವಿವಾಹಕ್ಕೆ ಸಂಸರ್ಗ, ಶಾಸ್ತ್ರ ನಿಷಿದ್ಧ ಅನ್ನುತ್ತೀರಿ. ಅದೇ ಶಾಸ್ತ್ರದ ರೀತ್ಯಾ ನಿಷಿದ್ಧವಾದ ಬ್ರಾಹ್ಮಣೇತರರ ವೇದಾಧ್ಯಯನ ಕಾಲಧರ್ಮಕ್ಕನುಸಾರ ಅಗತ್ಯ ಎನ್ನುತ್ತೀರಿ. ಇಷ್ಟೆಲ್ಲ ದ್ವಂದ್ವದಲ್ಲಿ ನಿಮ್ಮ ನಿಜವಾದ ನಿಲುವು ಯಾವುದು? ಈ ದ್ವಂದ್ವಯಾಕೆ?

ಸ್ವಾ: (ತುಂಬಾ ಗೊಂದಲಕ್ಕೊಳಗಾಗಿ) ನೋಡಿ, ಇದರಲ್ಲಿ ದ್ವಂದ್ವವೇನು ಬಂತು? ಅಷ್ಟಕ್ಕೂ ಅವರೇ ಶಂಕೆಗೊಳಗಾಗಿ ನನ್ನ ಹತ್ತಿರ ಬಂದಿದ್ದು. ತಾನು ತುಳಿದದ್ದು ಸಗಣಿಯಾ ಅಥವಾ ಮತ್ತೇನಾದರೂ....? ಎಂದು ಅವರೇ ಶಂಕೆಗೊಂಡಿದ್ದರೆ ನಾನೇನು ಮಾಡಲಿ?

ಪ್ರ: ಅವರು ಶಂಕೆಗೊಂಡಿದ್ದರೆ ಏನಾಯಿತು? 'ಕಾಲಧರ್ಮಕ್ಕನುಗುಣವಾಗಿ' ಎಂದು ಕೊಂಡು ಬೇರೆಲ್ಲವನ್ನೂ ಒಪ್ಪುವ ನೀವು ಅವರಿಗೆ ಕೂಡ, "ಇದರಲ್ಲೇನಿದೆ? ಶಾಸ್ತ್ರ ಏನೋ ಹೇಳುತ್ತದೆ; ಆದರೆ ಕಾಲಧರ್ಮಕ್ಕನುಗುಣವಾಗಿ ಇದರಲ್ಲಿ ನಡೆಯಬಾರದ್ದು ಅಥವಾ ಎಲ್ಲೂ ನಡೆಯದಿದ್ದುದು ಏನೂ ಇಲ್ಲ" ಎಂದು ಹೇಳಬಹುದಿತ್ತಲ್ಲ?

ಅಲ್ಲದೆ, ಅವರೇನೂ ಶಂಕೆಗೊಂಡಿರಲಿಲ್ಲ. ಅವರಿಗೆ ತಾನು ತುಳಿದದ್ದು ಸಗಣಿಯೇ, ಏನೂ ದೋಷವಿಲ್ಲ ಎಂದು ಗೊತ್ತಿತ್ತು. ಆದರೆ ಸುತ್ತಲವರು ಬೇಕೆಂದೇ "ಅದು ಸಗಣಿಯಲ್ಲ" ಎಂದು ಕೂಗಾಡತೊಡಗಿದ್ದರಿಂದಷ್ಟೇ ಅವರು ನಿಮ್ಮಲ್ಲಿಗೆ ಬಂದಿದ್ದರು. ಅದೂ ಸುತ್ತಲವರ ಒತ್ತಡದಿಂದಲೇ.

ಸ್ವಾ: ಆದರೂ, ಒಬ್ಬ ಕಾಯಿಲೆಯ ಶಂಕೆಯಿಂದ ಔಷಧಿ ಬೇಕು ಎಂದು ಬಂದಾಗ ವೈದ್ಯನಾಗಿ ಔಷಧ ಕೊಡದೆ ಇರುವುದು ಹೇಗೆ?

ಪ್ರ: ಯಾಕೆ? ಸರಿಯಾದ ವೈದ್ಯನಾದರೆ ಪೂರ್ಣ ಪರೀಕ್ಷೆ ಮಾಡಿ. 'ನಿನಗೇನೂ ಕಾಯಿಲೆಯಿಲ್ಲ. ನಿಶ್ಚಿಂತನಾಗಿರು' ಎಂದು ಧೈರ್ಯ ಕೊಟ್ಟು ಕಳಿಸುವುದಿಲ್ಲವೇನು ? ಉದಾಹರಣೆಗೆ, ಕೆಲವರು, ತಮಗೆ ಏನೋ ದೊಡ್ಡ ಕಾಯಿಲೆ ಇದೆ ಎಂದೋ, ಬೇಗ ವಾಸಿಯಾಗಲಿ ಎಂದೋ, ಇಂಜೆಕ್ಷನ್ನನ್ನೇ ಕೊಡಲು ಕೇಳುತ್ತಾರೆ. ಎಷ್ಟೋ ಖೊಟ್ಟಿ ವೈದ್ಯರು ಜನರ ಈ ಶಂಕಾ ಮನೋಭಾವ ದುರುಪಯೋಗಪಡಿಸಿಕೊಂಡು ಬರೀ ನೀರಿನ (ಡಿಸ್ಟಿಲ್ಡ್ ವಾಟರ್) ಇಂಜೆಕ್ಷನ್ ಕೊಟ್ಟು ದುಡ್ಡು ಕೇಳುತ್ತಾರೆ. ಅಂಥ ವೈದ್ಯರನ್ನು ನ್ಯಾಯ ನಿಷ್ಠರೆನ್ನುತ್ತೀರಾ?

ಸ್ವಾ: ಹೌದು, ಇಂಜೆಕ್ಷನ್ನೇ ಬೇಕು ಎಂದರೆ ಮತ್ತೇನು ಮಾಡುವುದು?

ಪ್ರ: ನೋಡಿ ಸ್ವಾಮೀಜಿ, ನೀವು ಅಂಥದನ್ನೂ ಸಮರ್ಥಿಸುತ್ತೀರೆಂದಾದರೆ ಏನು ಹೇಳಬೇಕೋ ಗೊತ್ತಿಲ್ಲ. ಒಟ್ಟಿನಲ್ಲಿ ಇಷ್ಟೇ— ನೀವು ಒಂದು ದೊಡ್ಡ ಜನ ಸಮುದಾಯಕ್ಕೆ ಪ್ರಗತಿಯ ಮಾರ್ಗದರ್ಶನ ಮಾಡುವ ಜವಾಬ್ದಾರಿ ಹೊರಿಸಲ್ಪಟ್ಟವರು. ನಿಮ್ಮ ಮೂಲಭೂತ ಹೊಣೆಯನ್ನು ನೀವು ಎಷ್ಟು ಅಲ್ಲಗಳೆದರೂ ಅದು ಇಲ್ಲವಾಗುವುದಿಲ್ಲ. ಜೊತೆಗೆ, ನೀವು ವೇದಿಕೆಯ ಮೇಲೆ ಅಸ್ಪೃಶ್ಯತೆ ನಿವಾರಣೆ, ಜಾತೀಯ ಸಾಮರಸ್ಯಗಳ ಬಗ್ಗೆ ಭಾಷಣ ಕೂಡ ಮಾಡುವ ಮರಾದ್ದರಿಂದ ಮನುಷ್ಯ–ಮನುಷ್ಯರ ನಡುವೆ

(5ನೇ ಪುಟಕ್ಕೆ)

ಹರಿಹರಪುರ ಮಠಾಧೀಶರೊಂದಿಗೆ ಒಂದು ವಿಶಿಷ್ಟ ಸಂದರ್ಶನ

(4ನೇ ಪುಟದಿಂದ)
ಮೇಲು ಕೀಳಿನ ಭೇದ ಭಾವವಿಲ್ಲದ ಸಹ ಬಾಳ್ವೆ ಸಾಧ್ಯವಾಗುವಂತೆ ಶ್ರಮಿಸುವುದರಲ್ಲಿ ನಮಗೂ ನಿಮಗೂ ಎಲ್ಲರಿಗೂ ಜವಾಬ್ದಾರಿ ಇದ್ದೇ ಇದೆ.

ಸ್ವಾ: ಭಾಷಣ-ನಿರ್ಣಯ ಮಾಡುವವರೆಲ್ಲ ಎಲ್ಲಿ ಆಚರಣೆ ಮಾಡುತ್ತಿದ್ದಾರ್ರಿ? ವಿಶ್ವ ಹಿಂದು ಪರಿಷತ್ತಿನ ಸಮ್ಮೇಳನದಲ್ಲಿ ನಾನು ಇದನ್ನು ಬಹಳ ಕಟುವಾಗಿಯೇ ಟೀಕಿಸಿದ್ದೇನೆ. "ಹತ್ತಾರು ಬಾರಿಯಿಂದ ಇದೇ ನಿರ್ಣಯ ಪಾಸು ಮಾಡುತ್ತಲೇ ಇದ್ದೀರಲ್ಲ, ಅದನ್ನು ಯಾಕೆ ಯಾರೂ ಅನುಷ್ಠಾನಕ್ಕೆ ತರಲು ಶ್ರಮಿಸುವುದಿಲ್ಲ? ಅನುಷ್ಠಾನಕ್ಕೆ ತರುವ ಸಾಮರ್ಥ್ಯ ನಮಗೆಲ್ಲ ಇಲ್ಲವಾದರೆ ನಿರ್ಣಯ ಏಕೆ ಮಾಡ ಬೇಕು?" ಎಂದು ಬಹಳ ತೀಕ್ಷ್ಣವಾಗಿಯೇ ಆಕ್ಷೇಪಿಸಿದ್ದೇನೆ.

ಅಷ್ಟೆಲ್ಲ ಯಾಕ್ರೀ, ಎಲ್ಲ ಹಿಂದುಗಳೂ ಒಂದೇ ಅನ್ತಾರಲ್ಲ. ಮೊದಲು ಬ್ರಾಹ್ಮಣರಲ್ಲಿರುವ ಬೇರೆ ಬೇರೆ ಜಾತಿಗಳವರನ್ನೆಲ್ಲ ಒಂದು ಎಂದು ಒಪ್ಪಿ ಅದರಂತೆ ನಡೆದುಕೊಳ್ಳಲಿಕ್ಕೇ ಇನ್ನೂ ಇವರೆಲ್ಲ ತಯಾರಿಲ್ಲವಲ್ರೀ?

ಇದೇ ವಿಶ್ವ ಹಿಂದು ಪರಿಷತ್ತಿನ ಮುಖಂಡರೇ ಒಬ್ಬರು ಸ್ವಾಮೀಜಿ; ಶಿವಳ್ಳಿ ಸ್ಮಾರ್ತರೇ ಆದರೂ ಸಂಪ್ರದಾಯ ಬದಲು ಎಂಬ ಕಾರಣಕ್ಕೆ ಇನ್ನೊಂದು ಶಿವಳ್ಳಿ ಬ್ರಾಹ್ಮಣರದೇ ಮಠದಲ್ಲಿ ಅವರು ಸಹಪಂಕ್ತಿಗೆ ತಯಾರಿಲ್ಲ ಅವರ ಅಡುಗೆಮನೆಯೇ ಬೇರೆಯಾಗಬೇಕು. ಅಲ್ಲಿಗೆ ತಮ್ಮವರನ್ನಲ್ಲದೆ ಇನ್ನೊಬ್ಬ ಬ್ರಾಹ್ಮಣನನ್ನು ಅವರು ಬಿಟ್ಟುಕೊಳ್ಳುವುದಿಲ್ಲ. ಇನ್ನು ಎಲ್ಲ ಹಿಂದುಗಳನ್ನೂ ಒಂದು ಮಾಡುವ ಮಾತೆಲ್ಲಿ ಬಂತು?

(ಇದು ಪೇಜಾವರ ಮಠಾಧೀಶರನ್ನು ಕುರಿತದ್ದು. ಈಚೆಗೆ ಅವರು ಈ ಮಠಕ್ಕೆ ಭೇಟಿ ಕೊಟ್ಟಾಗ ಆಚರಿಸಿದರೆನ್ನಲಾದ ಭೇದ ಭಾವದ ಉಲ್ಲೇಖ.)

ನಾವು: ನಿಮ್ಮ ಈ ಮಾತು ನಿಜವಾಗಿಯೂ ಎಲ್ಲರೂ ವಿಚಾರ ಮಾಡುವಂಥದು ಆದರೆ ಇಷ್ಟೇ ಕಾಳಜಿ ನಿಮಗೆ ಖಂಡಿತವಾಗಿಯೂ ಇರುವುದು ಹೌದಾದರೆ, ಈ ಜಾತ್ಯತೀತ ವಿವಾಹ ನಿಮಗೆ ದೋಷ ಎನ್ನಿಸ ಬಾರದಿತ್ತು. ಅದಕ್ಕೆ ಪ್ರಾಯಶ್ಚಿತ್ತ ಮಾಡಿಸಲು ಹೇಳಬಾರದಿತ್ತು. ನಿಮಗೆ ಗೊತ್ತಿದ್ದೇ, ನಿಮ್ಮ ಶಿಷ್ಯರುಗಳೇ ಹೇರಿರುವ ಈ ಬಹಿಷ್ಕಾರ, ಮಕ್ಕಳು ತಂದೆ-ತಾಯಿಯ ಮನೆಗೆ ಬರಬಾರದೆಂಬ ನಿಷೇಧ ಇದೆಲ್ಲ ಈಗಿನ ಕಾಲಕ್ಕೆ ಸಲ್ಲುವಂಥದಲ್ಲ ಎಂದು ತಿಳಿಸಿ ಹೇಳಲು ಸಾಧ್ಯವಿತ್ತು.

ಧರ್ಮಶಾಸ್ತ್ರ, ಧರ್ಮಶಾಸ್ತ್ರ ಎನ್ನುತ್ತೀರಲ್ಲ. ಈ ದೇಶದ ಆಧ್ಯಾತ್ಮಿಕ ಮತ್ತು ವೈಚಾರಿಕ ಸಂಪತ್ತಿನ ಇಡೀ ಭಂಡಾರವನ್ನು ಪೂರ್ತಿಯಾಗಿ ಅರಗಿಸಿಕೊಂಡು ಅದನ್ನು ಜಗತ್ತಿನೆದುರು ಎತ್ತಿ ಹಿಡಿದು ಈ ದೇಶದ ಧರ್ಮಕ್ಕೆ ಜೀವ ಕಳೆ ತುಂಬಿದ ಸ್ವಾಮಿ ವಿವೇಕಾನಂದರು ನಿಮ್ಮ ಧರ್ಮಶಾಸ್ತ್ರದ ಪ್ರಕಾರ ಈ ಯಾವ ಜ್ಞಾನಕ್ಕೂ ಅರ್ಹರಾಗಿರದಿದ್ದವರು. ಇವತ್ತು ಅವರನ್ನು ನೀವು ನಿಮ್ಮ ಈ ವಿಶ್ವಹಿಂದುಪರಿಷತ್ತಿನವರೆಲ್ಲ ಒಬ್ಬ ಮಹಾ ಪುರುಷನೆಂದು ಪೂಜಿಸುವುದಿಲ್ಲವೇನು?

ಸ್ವಾ: ಯಾಕೆ, ವಿವೇಕಾನಂದರು ಯಾವ ಜಾತಿ? ಬ್ರಾಹ್ಮಣರಲ್ಲವಾ?

ಪ್ರ: ಅಲ್ಲ, ಅವರು ಕ್ಷತ್ರಿಯರು.... ಹಾಗೇ, ಧರ್ಮಶಾಸ್ತ್ರದಲ್ಲಿ ಹೇಳಿದೆ ಎಂದು ಹೇಳಿಕೊಂಡು ನಮ್ಮ ತಂದೆಗೆ ಮಾತ್ರ ಪ್ರಾಯಶ್ಚಿತ್ತ ಬೋಧಿಸುತ್ತಿರುವ ನೀವು, ನಿಮ್ಮ ಶಿಷ್ಯ ಸಮೂಹದಲ್ಲೇ ನಡೆದ ಇನ್ನೂ ಕೆಲವು ಅಂತರ್ಜಾತಿ ಮದುವೆಗಳ ವಿಚಾರದಲ್ಲೂ ಹೀಗೇ ಮಾಡಿದ್ದೀರಾ?

(ಕೆಲವು ದೊಡ್ಡ ದೊಡ್ಡ ಶ್ರೀಮಂತರ ಮನೆಗಳಲ್ಲೂ ಈ ಹಿಂದೆ ಅಂತರ್ಜಾತಿ ವಿವಾಹಗಳಾದದ್ದಿದೆ. ಆಗ ಭಟ್ಟರುಗಳೂ ಅವರನ್ನು ಎದುರು ಹಾಕಿಕೊಳ್ಳಲಿಲ್ಲ. ಗುಲ್ಲೂ ಮಾಡಲಿಲ್ಲ. ಮೂಗು ಒತ್ತಿ ಬಾಯಿ ಕಳಿಸಿ ಪಂಚಗವ್ಯ ಹುಯ್ಯಲೂ ಇಲ್ಲ. ಅಂತರ ಜಾತಿ ಹಾಗಿರಲಿ, ಅಂತರ-ಧರ್ಮದ ವಿವಾಹವೊಂದರ ಪ್ರಕರಣದಲ್ಲಂತೂ ಪುಷ್ಕಳವಾದ ಭೋಜನ, ಕೈತುಂಬ ದಕ್ಷಿಣೆ ತರುವಂಥ ತೇಪೆ ಕಾರ್ಯಕ್ರಮವೊಂದನ್ನು ನೆರವೇರಿಸಿ, ಒಂದು ಮಾಡಿಕೊಂಡರು.)

ಸ್ವಾ: ನೀವು ಹೀಗೆಲ್ಲ ನನ್ನ ಬಾಯಿಂದ ಹೇಳಿಸಿ ನನ್ನ ಮರ್ಯಾದೆ ತೆಗೆಯುತ್ತಿದ್ದೀರಿ. ನನ್ನನ್ನು ಇಕ್ಕಟ್ಟಿಗೆ ಸಿಕ್ಕಿಸುತ್ತಿದ್ದೀರಿ. ಹೀಗಾದರೆ ಈ ಮೂರ್ನಾಲ್ಕು ಶಾಲೆಗಳೂ ಮುಚ್ಚಿ ಹೋಗುತ್ತವೆ, ಅಷ್ಟೇ.

ಪ್ರ: ಶಾಲೆಗಳು ಯಾಕೆ ಮುಚ್ಚಿ ಹೋಗುತ್ತವೆ? ನಾವೇನೂ ನಿಮ್ಮ ಶಾಲೆಗಳ ಬಗ್ಗೆ ಯಾವುದೇ ಟೀಕೆ ಮಾಡಲಿಲ್ಲವಲ್ಲ. ಅವುಗಳ ವಿಚಾರದಲ್ಲಿ ನಮ್ಮ ಕೈಲಾದ ಮಟ್ಟಿಗೆ ಒಂದಿಲ್ಲೊಂದು ರೀತಿಯಲ್ಲಿ ಬೆಂಬಲವನ್ನೇ ಕೊಟ್ಟಿದ್ದೇವಲ್ಲ. ನಾವು ಈಗ ಕೇಳುತ್ತಿರುವ ವಿಚಾರಕ್ಕೂ ಶಾಲೆಗಳು ಮುಚ್ಚುವುದಕ್ಕೂ ಏನು ಸಂಬಂಧ?

ಸ್ವಾ: ಹೌದು ಮತ್ತೆ. ನನಗೀಗಲೇ 67 ವರ್ಷ ಆಗಿಹೋಯಿತು. ಹೀಗೆಲ್ಲ ನಡೆಯುತ್ತ ಬಂದರೆ ನನಗೆ ಯಾವ ತಾಪತ್ರಯವೂ ಬೇಡ ಎಂದು ಎಲ್ಲ ಕೈಬಿಟ್ಟು ಸುಮ್ಮನೆ ಕೂತುಬಿಡುತ್ತೇನೆ. ಈಗೇನೋ ನನ್ನ ಮೇಲಿನ ವಿಶ್ವಾಸದಿಂದ ನಾವು ಯಾರನ್ನು ಕೇಳಿದರೂ ದುಡ್ಡೋ ಮತ್ತೊಂದೋ ಕೊಡ್ತಿದ್ದಾರೆ. ಹೇಗೋ ಎಲ್ಲ ನಡೆಯುತ್ತಿದೆ. ಮತ್ತೆ ಯಾರು ನಡೆಸುತ್ತಾರೆ?

ಸಮಿತಿಯವರು ನಡೆಸುತ್ತಾರೆ ಎನ್ನಿಸಬಹುದು. ಈ ಸಮಿತಿ-ಗಿಮಿತಿಯವರೆಲ್ಲ ನಡೆಸುವ ಕ್ರಮಕ್ಕೆ ನಾನೊಂದು ಉದಾಹರಣೆ ಹೇಳುತ್ತೇನೆ.

ನನ್ನ 60ನೇ ವರ್ಧಂತಿಯ ನೆನಪಿಗೆ ಅಂತ 60 ಸಾವಿರ ರೂ. ನಿಧಿ ಸಂಗ್ರಹಿಸಿದ್ದೇವೆ ಎಂದು ಒಂದು ದೊಡ್ಡ ಸಮಾರಂಭ ಮಾಡಿ, ದೊಡ್ಡ ದೊಡ್ಡ ಮಾತುಗಳನ್ನಾಡಿ ಒಂದು ಚೆಕ್ ಕೊಟ್ಟರು. ದುಡ್ಡು ಇದೇ ಸಿಂಡಿಕೇಟ್ ಬ್ಯಾಂಕಿನಲ್ಲಿದೆ ಎಂದರು. ಎಲ್ಲ ಮುಗಿದ ಮೇಲೆ ಚೆಕ್ಕನ್ನು ಬ್ಯಾಂಕಿಗೆ ಕಳಿಸಿದರೆ ಅಲ್ಲೆಲ್ಲಿದೆ ದುಡ್ಡು? ಹೀಗಿದೆ ಇವರುಗಳ ವಹಿವಾಟು....

ಗುರುಗಳು ಹೀಗೆ, ನಾವು ಈ ವಿಚಾರಗಳನ್ನೆಲ್ಲ ಅವರಲ್ಲಿ ಚರ್ಚಿಸುವುದರಿಂದ ಶಾಲೆಗಳು ಮುಚ್ಚಿಹೋಗುತ್ತವೆ ಎಂದಿದ್ದು ಒತ್ತಡ ಹೇರುವ ಒಂದು ತಂತ್ರ ಎಂದು ನಮಗೆ ಮನವರಿಕೆಯಾಯಿತು. ಈಗ ನಾವೂ ಕೂಡ ಸ್ವಲ್ಪ ದೃಢವಾಗಿ ಹೇಳದೇ ವಿಧಿಯಿರಲಿಲ್ಲ.

ಪ್ರ: ನೋಡಿ ಸ್ವಾಮೀಜಿ, ನೀವು ಹೀಗೆ ಪರೋಕ್ಷವಾಗಿ ಒತ್ತಡ ಪ್ರಯೋಗಿಸುವುದು ಸರಿಯಲ್ಲ. ನಮಗೆ ಒಬ್ಬರದು ತಪ್ಪು ಎನ್ನಿಸಿದನ್ನು ಅವರ ಹತ್ತಿರ ಕೇಳುವುದನ್ನಾಗಲಿ, ಪ್ರಕಟಿಸುವುದನ್ನಾಗಲಿ ಹತ್ತಿಕ್ಕುವುದಕ್ಕೆ ಯಾರೂ ಹೀಗೆ ಒತ್ತಡ ಹೇರುವಂತಿಲ್ಲ.

ಸ್ವಾ: ಏನ್ರಪ್ಪ, ನೀವೀಗ ನನ್ನನ್ನು ನನ್ನ ಪಾಡಿಗೆ ಉಂಡುಕೊಂಡು ಇರಲಿಕ್ಕಾದರೂ ಬಿಡುತ್ತೀರಾ? ನಾನು ಈ ಪೀಠ, ಮಠ ಎಲ್ಲ ತ್ಯಜಿಸಿ, ನಮ್ಮದೇ ಶಾಲೆಯಲ್ಲಿ ಒಂದು ರೂಮಿನಲ್ಲಿದ್ದುಕೊಂಡು ಯಾರ ಹಂಗಿಲ್ಲದೆ ಇದ್ದುಬಿಡುತ್ತೇನೆ.

ಪ್ರ: ಹಾಗಿರುವುದಾಗಿದ್ದರೆ ನಾವು ನಿಮ್ಮನ್ನು ಕೇಳುವುದಕ್ಕೆ ಬರುವ ಅಗತ್ಯವೇ ಬರುತ್ತಿರಲಿಲ್ಲ. ಈ ಪ್ರಾಯಶ್ಚಿತ್ತ, ಶುದ್ಧೀಕರಣ, ಬಹಿಷ್ಕಾರ—ಇಂಥ ಹಗರಣಗಳೂ ಹುಟ್ಟಿಕೊಳ್ಳುತ್ತಿರಲಿಲ್ಲ.

ನಿಮಗೆ ಎಲ್ಲ ವಿಚಾರ ಮೊದಲಿನಿಂದಲೂ ಗೊತ್ತಿರುವುದು ಮಾತ್ರವಲ್ಲ, ನೀವೇ ಇದನ್ನೆಲ್ಲ ಉದ್ದೇಶಪೂರ್ವಕವಾಗಿ ಮಾಡಿಸುತ್ತಿರುವುದು ಎಂದೂ ನಮಗೆಲ್ಲ ಅನ್ನಿಸುತ್ತಿದೆ. ಆದ್ದರಿಂದ ನಾಡಿದ್ದು 17ನೇ ತಾರೀಕು ನೀವು ಹರಡಗೋಡಿನ ಕಾರ್ಯಕ್ರಮದ ವೇಳೆ ಸಿರಿಮನೆ ರಾಮಯ್ಯನವರಿಗೆ ತೀರ್ಥ ಕೊಡುವ ಫೋಟೋ ತೆಗೆದು..

ಸ್ವಾ: ತೀರ್ಥ ಕೊಟ್ಟರೇನಾಯಿತು? ನಾನು ಎಲ್ಲಾದರೂ ಇಂಥ ಕಾರ್ಯಕ್ರಮದಲ್ಲಿ ಭಾಗವಹಿಸಿದರೆ ಎಷ್ಟೋ ಜನ ಬಂದು ತೀರ್ಥ ತೆಗೆದುಕೊಳ್ಳುತ್ತಾರೆ.

ಪ್ರ: ಆದರೆ ಈ ಪ್ರಕರಣದಲ್ಲಿ ನೀವು ತೀರ್ಥ ಕೊಡುವುದರ ಅರ್ಥ-ಉದ್ದೇಶ ಎಲ್ಲರಿಗೂ ಗೊತ್ತಿದೆ, ನಿಮಗೂ ಗೊತ್ತಿದೆ. ಆದ್ದರಿಂದ "ಪ್ರಾಯಶ್ಚಿತ್ತಾರ್ಥವಾಗಿ ತೀರ್ಥ ಕೊಡುತ್ತಿರುವ ಫೋಟೋ" ಎಂದೇ ಪ್ರಕಟಿಸುತ್ತೇವೆ.

ಸ್ವಾ: ಹಾಗಾದರೆ ನಾನು ಅಲ್ಲಿ ಯಾರಿಗೂ ತೀರ್ಥವನ್ನೇ ಕೊಡುವುದಿಲ್ಲ. ಈಗಲೇ ಮಂಜಪ್ಪ ನಾಯ್ಕನಿಗೆ ಫೋನ್ ಮಾಡಿ, ನನಗೆ ಬರಲು ಆಗುವುದಿಲ್ಲ ಎಂದು ಬಿಡುತ್ತೇನೆ.

ಪ್ರ: ನೀವು ಮಾಡುತ್ತಿರುವ ಕೆಲಸ ನ್ಯಾಯವಾದುದೆಂದು ನಿಮಗೆ ಧೈರ್ಯ ಇದ್ದರೆ ನೀವೇಕೆ ಕಾರ್ಯಕ್ರಮಕ್ಕೇ ಚಕ್ಕರ್ ಹಾಕುತ್ತೀರಿ? ನಾವೇನೂ ಹಾಗೆ ಹೇಳಿಲ್ಲವಲ್ಲ.

ಈ ಇಡೀ ಪ್ರಕರಣದಲ್ಲಿ ನೀವು ವಹಿಸಿದ ಪಾತ್ರ, ನಿಮ್ಮ ನಿಲುವು ಸರಿಯಾ ಎಂದು ನಿಮ್ಮ ಹತ್ತಿರವೇ ಚರ್ಚಿಸುವುದಷ್ಟೇ ನಮ್ಮ ಉದ್ದೇಶವಾಗಿತ್ತು. ಬರುತ್ತೇವೆ, ನಮಸ್ಕಾರ

....

ನಾವು ಹಾಗೆ ಹೇಳಿ ಬಂದರೂ ಅವರು 16ರಂದೇ ಅಲ್ಲಿಗೆ ಹೋಗಿ ಬಂದು ತೀರ್ಥ ಕೊಡುವ ಸಂದಿಗ್ಧದಿಂದ ಜಾರಿಕೊಂಡರು. ಆದರೆ ತಮ್ಮ ನಿಲುವು-ನಡೆ ಇಷ್ಟೊಂದು ಪೊಳ್ಳು ಮತ್ತು ಪ್ರಶ್ನಾರ್ಹ ಎಂದು ಅವರಿಗೇ ಗೊತ್ತಾದ ಮೇಲೂ ಸಹ ಅದನ್ನು ತಿದ್ದಿಕೊಳ್ಳುವ ಮೂಲಕ, ತಾವೇ ಸೃಷ್ಟಿಸಿಕೊಂಡ ಈ ಗೋಜಲಿನಿಂದ ಗೌರವಯುತವಾಗಿ ಹೊರ ಬರುವ ಪ್ರಯತ್ನವನ್ನು ಮಾತ್ರ ಮಾಡಲಿಲ್ಲ. 27 ರಂದು ಸಿರಿಮನೆಗೆ ಶುದ್ಧಿ-ಪುಣ್ಯಾಹವನ್ನೂ, 29ರಂದು ನಮ್ಮ ತಂದೆಗೆ ಪ್ರಾಯಶ್ಚಿತ್ತವನ್ನೂ ಮಾಡಿಸಿಯೇ ತೀರಿದರು.

....

ಈ ಮೇಲಿನದು ಸ್ಥೂಲವಾಗಿ ನಾವು ನಡೆಸಿದ ಸಂದರ್ಶನ. ಸಂದರ್ಶನದುದ್ದಕ್ಕೂ ಅವರು ತಮ್ಮ ಎಲ್ಲ ಜವಾಬ್ದಾರಿ ಮತ್ತು ಈ ವಿಚಾರದಲ್ಲಿನ ತಮ್ಮ ಪಾತ್ರದ ಹೊಣೆಯಿಂದ ಜಾರಿಕೊಳ್ಳಲು ನೋಡಿದರು. ಆದರೆ, ಎಲ್ಲೂ ಅದು ಅವರಿಗೆ ಸಾಧ್ಯವಾಗಲಿಲ್ಲ.

ಹಾಗೆ ತೀರ ಇಕ್ಕಟ್ಟಿಗೆ ಸಿಕ್ಕಿದಾಗೆಲ್ಲ ತನ್ನ ವಯಸ್ಸನ್ನೋ, ತನ್ನ ವಿದ್ಯಾಸಂಸ್ಥೆಗಳಿಗೆ ಅಡ್ಡಿಯಾಗುತ್ತದೆ ಎಂಬ ವಾದವನ್ನೋ ಮುಂದೊಡ್ಡಿ ನಮ್ಮ ಬಾಯಿ ಕಟ್ಟಿಸಲು ಪದೇ ಪದೇ ಯತ್ನಿಸಿದರು. ಈ ಸಂದರ್ಶನವನ್ನು ಧ್ವನಿ ಮುದ್ರಿಸಿಕೊಳ್ಳುತ್ತೇವೆಂದರೆ, "ಹಾಗಾದರೆ ನಾನು ಮಾತೇ ಆಡುವುದಿಲ್ಲ. ಎದ್ದು ಒಳಗೆ ಹೋಗಿ ಬಿಡುತ್ತೇನೆ" ಎಂದು ಬೆದರಿಸಿದರು! (ಬೆದರಿದರು?)

"ಮತ್ಯಾತಕ್ಕೂ ಅಲ್ಲ. 'ನಾನು ಹಾಗೆ ಹೇಳಲೇ ಇಲ್ಲ' ಎನ್ನುವುದು-ಇನ್ನೇ ಮುಂತಾದ ಗೊಂದಲಗಳು ಆಮೇಲೆ ಬರಬಾರದಲ್ಲ, ಅದಕ್ಕಾಗಿ ಅಷ್ಟೇ"

"ಹೌದು ಮತ್ತೆ. ಒಂದು ಶಬ್ದ ನಾನು ಹೇಳಲ್ಲದ್ದು ಪ್ರಕಟಿಸಿದರೂ ನಾನು ಸುಮ್ಮನಿರುವುದಿಲ್ಲ."

"ಅದಕ್ಕೇ ಟೇಪ್ ಮಾಡುತ್ತೇವೆಂದಿದ್ದು. ನಮಗೆ ಯಾವುದೇ ದ್ವೇಷವಾಗಲಿ ದುರುದ್ದೇಶವಾಗಲಿ ಇಲ್ಲ. ನಿಮ್ಮ ತೇಜೋವಧೆ ಮಾಡುವುದೂ ನಮ್ಮ ಉದ್ದೇಶವಲ್ಲ. ಈ ವಿಚಾರದಲ್ಲಿ ನೀವು ತೆಗೆದುಕೊಂಡ ಕ್ರಮದ ಸರಿ ತಪ್ಪುಗಳನ್ನು ಕುರಿತು ನೇರವಾಗಿ ನಿಮ್ಮೊಂದಿಗೆ ಚರ್ಚಿಸುವುದಕ್ಕೆ ಬಂದಿದ್ದೇವೆ. ಅ... ರಿರುವ ಶಕ್ತಿ ಮೀರಿ ಏನೂ ತಪ್ಪಿಲ್ಲದಂ... ವರದಿ ಮಾಡುತ್ತೇವೆ. ಆದರೂ ಕೂ... ಮುಂದೆ ಯಾವುದೇ ಗೊಂದಲಕ್ಕೆ ಅವಕಾ... ಇರಬಾರದು ಎಂಬುದಕ್ಕಾಗಿ ಮಾತ್ರ ... ಪ್ ಮಾಡುತ್ತೇವೆ"

ಅವರು ಒಪ್ಪಲೇ ಇಲ್ಲ. ಅವರಿಗೆ ಗೊತ್ತಾಗದಂತೆ ಟೇಪ್ ಮಾಡುವುದೇನೂ ಕಷ್ಟ... ಗಿರಲಿಲ್ಲ. ಅವರು ಕೂಡ, ಸುಮಾರು 5... 60 ಅಡಿ ದೂರದಿಂದಲೇ ರಿಕಾರ್ಡ್ ಮಾ... ಬಲ್ಲ 'ರಿಮೋಟ್ ರಿಕಾರ್ಡರ್'ನಿಂದ ಪೂ... ಸಂಭಾಷಣೆಯನ್ನು ರಿಕಾರ್ಡ್ ಮಾಡಿ... ಡಿರುತ್ತಾರೆಂದೇ ನಮ್ಮ ಗ್ರಹಿಕೆ. ಆದರೆ...

(6ನೇ ಪುಟ...

ಹರಿಹರಪುರ ಮಠಾಧೀಶರೊಂದಿಗೆ ಒಂದು ವಿಶಿಷ್ಟ ಸಂದರ್ಶನ

(...ನೇ ಪುಟದಿಂದ)

ಮುಚ್ಚುಮರೆಯಲ್ಲೆಲ್ಲ ಏನನ್ನೋ 'ಸಾಧಿಪುದು' ನಮ್ಮ ಜಾಯಮಾನಕ್ಕೆ ಒಗ್ಗುವಂಥದಲ್ಲ. ಅಲ್ಲದೆ ಅವರಿಗೆ ಅಕಸ್ಮಾತ್ ಅನುಮಾನ ಬಂದರೆ ಅದನ್ನೇ ನೆಪ ಮಾಡಿಕೊಂಡು ಈ ಚರ್ಚೆಯಿಂದಲೇ ತಪ್ಪಿಸಿಕೊಳ್ಳುವ ಸಂಭವವಿತ್ತು. ಆದ್ದರಿಂದ ನಾವು ಬಿಡುಕಲಿಲ್ಲ.

ಅಷ್ಟಕ್ಕೂ ಅವರು ನಿಲ್ಲಿಸಲಿಲ್ಲ. ಈ ಸಂದರ್ಶನ ಪ್ರಕಟವಾಗಬಾರದೆಂದು ಎಲ್ಲ ರೀತಿಯ ತಂತ್ರವನ್ನೂ ಪ್ರಯೋಗಿಸಿ ನೋಡಿದರು. ಮಧ್ಯೆ ಮಧ್ಯೆ, ತಾನು ಆಡಿದ ಕೆಲವು ಮಾತುಗಳನ್ನು "ಇದನ್ನೆಲ್ಲ ಬರೆಯಬೇಡಿ. ಇದೆಲ್ಲ ಬರೆದರೆ ನಮಗೂ ಮರ್ಯಾದೆ ಬರೋಲ್ಲ, ಪತ್ರಿಕೆಗೂ ಮರ್ಯಾದೆ ಬರೋಲ್ಲ" ಎಂದು ಪದೇ ಪದೇ ಹೇಳುತ್ತಿದ್ದರು. "ಉತ್ತರ ಕೊಡುವುದು ನಿಮ್ಮ ಇಷ್ಟ. ಆದರೆ ಯಾವುದನ್ನು ಪ್ರಕಟಿಸಿದರೆ ಪತ್ರಿಕೆಗೆ ಮರ್ಯಾದೆ ಬರುತ್ತೆ ಅಥವಾ ಬರುವುದಿಲ್ಲ ಎಂಬುದರ ತೀರ್ಮಾನ ನನ್ನದು. ನೀವೀಗ ಆಡುತ್ತಿರುವ ಮಾತುಗಳೆಲ್ಲ ಪ್ರಾಮುಖ್ಯವಿಲ್ಲದವೇನಲ್ಲ" ಎನ್ನಬೇಕಾಯಿತು

"ಆದರೆ ನಾವು ನಿಮ್ಮ ಪತ್ರಿಕೆಯ ಪೋಷಕರು. ನೀವು ನಮ್ಮ ಬಗ್ಗೆಲ್ಲ ಬರೆಯಬಾರದು" ಎಂದರು. "ನಮ್ಮ ಪತ್ರಿಕೆಗೆ ಪೋಷಕರೆಂಬ ಪ್ರತ್ಯೇಕ ವರ್ಗವಿಲ್ಲ. ಎಲ್ಲ ಚಂದಾದಾರರೂ ಪೋಷಕರೇ" ಎಂದಾಗ, "ನಾವು 200 ರೂ. ಕೊಟ್ಟಿದ್ದೇವೆ" ಎಂಬ ಮುಲಾಜಿನ ಪಣ. "ಅದು ಆಜೀವನ ಚಂದಾ. ಹಾಗೆ ಕೊಟ್ಟ ಮಾತ್ರಕ್ಕೆ, ನಮಗೆ ಸರಿ ಅಥವಾ ಸರಿಯಲ್ಲವೆಂದು ಕಂಡುಬಂದ ವಿಚಾರವನ್ನು ಪ್ರಕಟಿಸಬೇಡವೆಂದು ಯಾರೂ ಹೇಳುವಂತಿಲ್ಲ" ಎನ್ನಬೇಕಾಯಿತು.

ಈ ವಿವಾಹದ ವಿಚಾರವನ್ನು ಒಂದು ದೊಡ್ಡ ಹಗರಣವಾಗಿ ಬೆಳೆಸಿದ ಪೂರ್ತಿ ವಿವರಗಳು ಅವರಿಗೆ ಗೊತ್ತಿದ್ದ ಬಗ್ಗೆ ಒಂದು ಪುರಾವೆ ಇದು: ಗುರುಗಳು ವಿಠಲ್‌ಗೆ ಕೇಳಿದ್ದು—

"ನೀವು ರಾತೋರಾತ್ರಿ ಕಿಗ್ಗದಲ್ಲಿ ಅದ್ಯಾರೋ ಭಟ್ಟರ ಮನೆಯ ಬಾಗಿಲು ತೆಗೆಸಿ ಬೆದರಿಕೆ ಹಾಕಿದಿರಂತಲ್ಲ. ಏನಾದರೂ ಹೇಳುವುದು-ಕೇಳುವುದು ಇದ್ದರೆ ಹಗಲು ಹೋಗಬೇಕಿತ್ತು. ರಾತ್ರಿ ಹೋಗಿ ಗೂಂಡಾಗಿರಿ ನಡೆಸುವ ಅಗತ್ಯವೇನಿತ್ತು?"

ಅಂದರೆ ಫೆಬ್ರವರಿ ಮೊದಲ ವಾರದಲ್ಲಿ (ಅಂದರೆ ಈ ಹಗರಣ ಇನ್ನೂ ಆರಂಭದ ಹಂತದಲ್ಲಿದ್ದಾಗ) ನಡೆದ ನಮ್ಮ ಈ ಭೇಟಿಯ ವಿಚಾರ ಕೂಡ ಅವರಿಗೆ ಗೊತ್ತಿತ್ತು. ಆದರೆ ಅವರು ಸಂದರ್ಶನದಲ್ಲಿ ನಮ್ಮೊಂದಿಗೆ ಹೇಳಿದ್ದು ತನಗೆ ಇದೆಲ್ಲ ಏನೂ ಗೊತ್ತೇ ಇಲ್ಲ-ಅಂತ.

ವಾಸ್ತವವಾಗಿ ಫೆಬ್ರವರಿಯಲ್ಲಿ ನಾವಿಬ್ಬರೂ 2 ಬಾರಿ ಕಿಗ್ಗಕ್ಕೆ ಹೋಗಿ, "ಸಿರಿಮನೆಯವರಿಗೆ ಎಲ್ಲರೂ ಬಹಿಷ್ಕಾರ ಹಾಕಬೇಕು" ಎಂದು ಊರಲ್ಲೆಲ್ಲ ಪ್ರಚಾರ ಮಾಡಿಕೊಂಡು ಸುತ್ತುತ್ತಿದ್ದವರಲ್ಲಿ ಪ್ರಮುಖರಾದ ವೆಂಕಟೇಶ ಭಟ್ಟ ಎಂಬವರನ್ನು ಕಾಣಲು ಯತ್ನಿಸಿದ್ದೆವು. ಅದು ಹಗಲೇ. ಹಾಗೆ ಅವರು ಸಿಗದಿದ್ದಾಗ ಸಂಜೆ 6ರ ನಂತರ ಖಂಡಿತ ಸಿಗುತ್ತಾರೆಂದು ಹೊರಟಿದ್ದು. ಆದರೆ ಬೈಕ್ ಕೆಟ್ಟು ಬೇರೆ ಯಾವುದೇ ವಾಹನ ಸೌಕರ್ಯ ಸಿಗುವುದು ಕಷ್ಟವಾಗಿ, ನಾವು ಕಿಗ್ಗಕ್ಕೆ ಹೋದಾಗ ರಾತ್ರಿ 9-15 ಗಂಟೆಯಾಗಿತ್ತು ಅಷ್ಟೆ.

ಅಲ್ಲಿ ನರಸಿಂಹಮೂರ್ತಿ ಭಟ್ಟ ಎಂಬ ಇನ್ನೊಬ್ಬರನ್ನೂ ಮಾತನಾಡಿಸಬೇಕಿತ್ತು. ಅಲ್ಲಿ ಬಾಗಿಲು ಹಾಕಿತ್ತು ಅವರನ್ನು ಕರೆದು, ನಮ್ಮ ಗುರುತು ಹೇಳಿ ಬಾಗಿಲು ತೆರೆಸಿ, ಸಮಾಧಾನ, ಸ್ನೇಹದಲ್ಲೇ ಮಾತಾಡಿದ್ದೇವೆ. ವೆಂಕಟೇಶ ಭಟ್ಟರ ಮನೆಯಲ್ಲೂ ಅಷ್ಟೇ. ಇದನ್ನು ಗುರುಗಳು ಒಪ್ಪದಿದ್ದಾಗ "ಹಾಗಿದ್ದರೆ ಅವರನ್ನು ಇಲ್ಲಿಗೆ ಕರೆಸಿ. ನಾವೂ ಬರುತ್ತೇವೆ. ನಿಮ್ಮೆದುರೇ ಕೇಳೋಣ ಏನು ಗೂಂಡಾಗಿರಿ ಮಾಡಿದೆವೆಂದು" ಎಂದಾಗ ಸುಮ್ಮಗಾದರು.

....

ಸಾರಾಂಶದಲ್ಲಿ

ನಾವು ನಮ್ಮ ಹಿತಕ್ಕಾಗಿ (ಗುರುಗಳು ಹೇಳುವಂತೆ ನಮ್ಮ 'ಸ್ವಾರ್ಥ'ಕ್ಕಾಗಿ) ಈ ಜಾತ್ಯತೀತ ಮದುವೆ ನೆರವೇರಿಸಿದೆವು. ಆದರೆ ಇದರಿಂದಾಗಿ, "ಮುಂದೆ ನಮ್ಮ ಬಾಳಿನಲ್ಲಿ ಮದುವೆ ಯೆಂಬುದೊಂದು ಉಂಟೋ ಇಲ್ಲವೋ!" ಎಂದು ಹತಾಶೆಯ ದವಡೆಗೆ ಸಿಕ್ಕಿದ್ದ ಎಷ್ಟೋ ಹೆಣ್ಣು ಮಕ್ಕಳಲ್ಲಿ ಕೆಲವರಿಗಾದರೂ ಕ್ಷೀಣವಾದ ಒಂದು ಆಸೆಯ ಬೆಳಕು, ಬಿಡುಗಡೆಯ ಒಂದು ಅಸ್ಪಷ್ಟ ಹಾದಿ ಕಂಡಿತಂತೆ. ಅವರಲ್ಲನೇಕರು ನಿಧಾನವಾಗಿ ಅದರ ಕಡೆ ಹೊರಳತೊಡಗಿದರಂತೆ.

ಅಮಾನುಷ ಚಿಂತನೆಯ ಕೆಲ ಮಂದಿ ಪಾಪ ಜೀವಿಗಳಿಗೆ ಈ 'ಅಧರ್ಮ' ಸಹಿಸದಾಯಿತಂತೆ. ಮೌಢ್ಯ, ಅನೀತಿ, ಅನ್ಯಾಯಗಳ ಪರಮಾವಧಿ ಮಿತಿಗಳನ್ನೆಲ್ಲ ಮೀರಿಯಾದರೂ ಸರಿ. ಅಂತೂ ಆ ಕ್ಷೀಣ ಬೆಳಕಿನ ಆಶೆಯನ್ನೂ ಹತ್ತಿಕ್ಕಬೇಕೆಂದು ಅವರಿಗೆ 'ಸಂಕಲ್ಪ'ವಾಯಿತಂತೆ. ಆದಕ್ಕಾಗಿ ನಮ್ಮ ಕುಟುಂಬಕ್ಕೆ, ಮುಖ್ಯವಾಗಿ ನಮ್ಮ ವೃದ್ಧ ತಂದೆ-ತಾಯಿಗಳಿಗೆ 'ತಕ್ಕ ಶಾಸ್ತಿ' ಮಾಡುವ ಮೂಲಕ ಆ ಎಲ್ಲ ಹೆಣ್ಣುಗಳನ್ನೂ ಪುನಃ ಅದೇ ಹತಾಶೆಯ ಕೋಣೆಯೊಳಗೇ ತಳ್ಳುವ ಯೋಜನೆ ರೂಪಿಸಿ ಜಾರಿಗೆ ತಂದರಂತೆ.

ಈ ಯೋಜನೆಯ ಬಗ್ಗೆ ಅವರೇ ಈ ರೀತಿ ಘೋಷಣೆ ಹೊರಡಿಸಿದ ನಂತರ, ಆ ಬೆಳಕನ್ನು ಜೋಪಾನ ಮಾಡುವುದಕ್ಕಾಗಿ ಅದನ್ನು ಸಮಾಜದ ಕೈಯಲ್ಲಿ ಇರಿಸಬೇಕಾಯಿತು. ನಾವು ನಡೆಯುತ್ತಿದ್ದ ದಾರಿಯ ಆಚೀಚೆಯಿಂದ ಅವರುಗಳು ನಮ್ಮ ಮೇಲೆ ಕೆಸರೆರಚಿದರೂ ನಾವು ಗಮನ ಕೊಡದೆ ಮುಂದೆ ಹೋದಾಗ ನಮ್ಮ ಕುತ್ತಿಗೆಯನ್ನೇ ಹಿಡಿದುಕೊಳ್ಳ ಬಂದಿದ್ದರಿಂದ ನಾವೂ ಅವನ್ನು ಎದುರಿಸಬೇಕಾಯಿತು. ಆದಕ್ಕಿದ್ದ ಒಂದೇ ಮಾರ್ಗ: ಈ ವಿಚಾರದ ಎಲ್ಲ ಮಗ್ಗಲುಗಳನ್ನೂ ಸಮಾಜದ ವಿವೇಚನೆಗೆ ಒಡ್ಡುವುದು.

ನಮ್ಮ ದೃಷ್ಟಿಯಲ್ಲಿ ಇದು ಸಮಾಜದ ಹೋರಾಟ. ನಾವು ಅದರಲ್ಲೊಂದು ಗುರಾಣಿ ಮಾತ್ರ.

—ಸಿರಿಮನೆ ನಾಗರಾಜ್.

ಚಿರಸ್ಮರಣೆ



ಸುಷ್ಮಾ

ನಿಧನ: 30-5-87

ಬಾಳ ತೋಟದಲ್ಲಿ ಹೂವಾಗಿ
ಅರಳುವ ಮುನ್ನ, ನಮ್ಮನ್ನೆಲ್ಲಾ
ನಕ್ಕು ನಲಿಸುವ ವಯಸ್ಸಿನಲ್ಲಿ
ಆ ಪರಮಾತ್ಮನ ಪಾದ ಸೇರಿದ
ನಿನಗಿದೋ ನಮ್ಮ ಅಶ್ರುತರ್ಪಣ.
ನಿನ್ನ ದಿವ್ಯ ಆತ್ಮಕ್ಕೆ ಚಿರಶಾಂತಿ ಸಿಗಲೆಂದು
ಪ್ರಾರ್ಥಿಸುವ, ದುಃಖ ತಪ್ತ

ತಂದೆ-ತಾಯಿ, ದೇವಾನ್;
ಒಲವಿನ ಅಣ್ಣ, ಬಂಧುಗಳು,
ಕೋಕಿಲಾ, ಕೊಪ್ಪ

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀಪಿಕಾ ಅಚ್ಚುಕೂಟ, ಕೊಪ್ಪ.